ಶ್ರೀ ವೈಜನಾಥ್ ಪಾಟೀಲ್: ಮಾನ್ಯ ಚೇರ್ಮನ್‌ರವರೇ. ಆ ವಿಷಯ ಒಂದು ವೇಳೆ ತಪ್ಪು ಇದ್ದರೆ. ಆ ಘಟನೆ ಸಂಬಂಧಿಸಿದ್ದರೆ. ಅದು ತಪ್ಪು ಎನ್ನುವ ವಿಚಾರದ ಬಗ್ಗೆ ನಾನು ನನ್ನ ವಿಚಾರವನ್ನು ಹೇಳಬೇಕಾಗುತ್ತದೆ. ಇಲ್ಲಿ ನನ್ನ ಹೆಸರನ್ನು ಪ್ರಸ್ತಾಪ ಮಾಡಿದರು, ಅದರ ಸಲುವಾಗಿ ನಾನು ಹೇಳುತ್ತಿದ್ದೇನೆ.

ಚೇರ್ಮನ್: ಆಯಿತು, ಮಾನ್ಯ ಬಿ.ಎಸ್.ಯಡಿಯೂರಪ್ಪನವರೇ. ತಾವು ಭಾಷಣವನ್ನು ಪ್ರಾರಂಭ ಮಾಡಿ.

ವಿತ್ತೀಯ ಕಾರ್ಯಕಲಾಪ

2005–06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು): ಮಾನ್ಯ ಛೇರ್ಮನ್‌ರವರೆ, ಉಪಾಧ್ಯಕ್ಷರಾಗಿ ಸರ್ವಾನುಮತದಿಂದ ಉಪಾಧ್ಯಕ್ಷರು ಆಯ್ಕೆಯಾದರು, ಈಗ ಆಯವ್ಯಯದ ಮೇಲೆ ಚರ್ಚೆ ಪ್ರಾರಂಭವಾಗುತ್ತಿದೆ. ಏಕೋ ಗಳಿಗೆ ಸರಿಯಿಲ್ಲವೆಂದು ತೋರುತ್ತದೆ. ನಿನ್ನೆ ರಾತ್ರಿಯಿಂದ ನಡೆದಂಥ ಘಟಾನಾವಳಿಗಳನ್ನು ನೋಡಿದರೆ ಈ ವಿತ್ತೀಯ ಕಾರ್ಯಕಲಾಪದ ಬಗ್ಗೆ ಚರ್ಚೆ ಆರಂಭ ಮಾಡಬೇಕೋ ಬೇಡವೋ ಎನ್ನುವ ಒಂದು ಸಂದಿಗ್ದ ಪರಿಸ್ಥಿತಿಯಲ್ಲಿ ನಾನು ಮಾತನಾಡುವುದಕ್ಕೆ ನಿಂತಿದ್ದೇನೆ. 2005–06ನೇ ಸಾಲಿನ ಆಯವ್ಯಯದ ಬಗ್ಗೆ ನಾನು ಹೆಚ್ಚು ಮಾತನಾಡುವುದಕ್ಕೆ ಇಷ್ಟಪಡುವುದಿಲ್ಲ, ಏಕೆಂದರೆ ಈ ಸರ್ಕಾರ ಇದ್ದರೆ ಈ ಆಯವ್ಯಯ ಕಾರ್ಯರೂಪಕ್ಕೆ ಬರುತ್ತದೆ! ಸರ್ಕಾರದ ಅಸ್ತಿತ್ವವೇ ನಿನ್ನೆ ರಾತ್ರಿಯಿಂದ ಯಕ್ಷಪ್ರಶ್ನೆಯಾಗಿರುವುದರಿಂದ ಈ ಆಯವ್ಯಯದ ಅನುಷ್ಠಾನ ಎಷ್ಟರಮಟ್ಟಿಗೆ ಆಗಬಹುದು ಎನ್ನುವಂಥದ್ದು ಬಹಳ ಸಂಶಯದಿಂದ ಕೂಡಿರುವಂಥ ಸಂಗತಿಯಾಗಿದೆ. ಈ ಆಯವ್ಯಯ ಹೇಗಿದೆ ಎಂದರೆ ಈ ಬೆಳ್ಳಿಯ ತಟ್ಟೆಯಲ್ಲಿ ಕಪ್ಪೆ ಇಟ್ಟು ಕೊಟ್ಟರೆ ಏನಾಗಬಹುದೋ ಆ ರೀತಿ ಈ ಆಯವ್ಯಯ ಇದೆ. ಜನಹಿತವನ್ನು ಈ ಸರ್ಕಾರ ಸಂಪೂರ್ಣ ಮರೆತಿದೆ. ನಿನ್ನೆಯಿಂದ ಪ್ರಾರಂಭವಾದ ಘಟಾನಾವಳಿಗಳನ್ನು ನೋಡಿದಾಗ ನೆಲಗಳ್ಳರಿಗೆ ಒಂದು ರೀತಿಯ ಸುಗ್ಗಿ ಕಾಲವಾಗಿದೆ. Notification, de-notification ಇತ್ಯಾದಿ ಬೇಕಾದದ್ದು ಬೇಡವಾದದ್ದು ಅನ್ನು ಮಾಡಿಕೊಂಡು ಒಂದು ರೀತಿಯ ಅರಾಜಕತೆ ಪರಿಸ್ಥಿತಿ ಈ ರಾಜ್ಯದಲ್ಲಿ ಪ್ರಾರಂಭವಾಗಿದೆ. ವ್ಯಾಪಕ ಭ್ರಷ್ಟಚಾರ. ವರ್ಷಪೂರ್ತಿ ವರ್ಗಾವಣೆ. ವರ್ಗಾವಣೆಗೆ

ಹಿಂದೆಂದೂ ಕಾಣದಷ್ಟು ಕೈ ಅದಲುಬದಲಾಗಿದೆ ಎನ್ನುವ ಮಾತು. ಕೆಲವು ಮಂತ್ರಿಗಳ ಬಂಧುಗಳೇ ಮುಂದೆ ನಿಂತು ಈ ತರಹ ವರ್ಗಾವಣೆಯಲ್ಲಿ ಸಮಪಾಲು ತೆಗೆದುಕೊಂಡು ಮಾಡುತ್ತಾರೆನ್ನುವ ಮಾತುಗಳು. ರಾಜಾರೋಷವಾಗಿ ನಾವು ಹಣ ಕೊಟ್ಟು ವರ್ಗಾವಣೆ ಮಾಡಿಕೊಂಡು ಬಂದಿದ್ದೇವೆ. ಶಾಸಕರಾದ ನೀವೇನು ಮಾಡಿಕೊಳ್ಳುತ್ತೀರಿ? ಎಂದು ಧೈರ್ಯವಾಗಿ ನೇರವಾಗಿ ಅಧಿಕಾರಿಗಳು ಕೇಳುವಂಥ ಉದ್ಧಟತನದ ವಾತಾವರಣ ಸೃಷ್ಟಿಯಾಗಿದೆ. ಕೆಲವು ಶಾಸಕರು ನಿರ್ಭೀತಿಯಿಂದ ತಮ್ಮ ಕರ್ತವ್ಯಗಳನ್ನು ಮಾಡಕ್ಕಾಗದಿರುವ ಉಸಿರು ಕಟ್ಟುವ ಪರಿಸ್ಥಿತಿ ಚಿಕ್ಕಮಗಳೂರು, ಬಾಗಲಕೋಟೆಗಳಲ್ಲಿದೆ. ಎಸ್.ಪಿ ಡೆಪ್ಯುಟಿ ಕಮಿಶನರ್‌ರವರುಗಳ ತಾಂಡವ ನೃತ್ಯ ಚಿಕ್ಕಮಗಳೂರು. ಬಾಗಲಕೋಟೆ ಇಂತಹ ಕಡೆಗಳಲ್ಲಿ ಚುನಾಯಿತ ಶಾಸಕರನ್ನು ಅರೆಸ್ಟ್ ಮಾಡಿಸಿ ಕಿರುಕುಳ ಕೊಡುವಂಥದ್ದು ನಿರಂತರವಾಗಿ ಈ ರಾಜ್ಯದ ಉದ್ದಗಲಕ್ಕೆ ನಡೆದಿದೆ. ನನ್ನ ದೃಷ್ಟಿಯಿಂದ 2004–05ನೇ ಸಾಲಿನ ಬಜೆಟ್ ಯಾವ ರೀತಿ ಕಾರ್ಯರೂಪಕ್ಕೆ ಬಂದಿದೆಯೆಂದರೆ. ಒಂದು ರೀತಿಯಲ್ಲಿ ಅಭಿವೃದ್ಧಿ ಕಾರ್ಯಗಳ ವಂಚಿತ ವರ್ಷ 2004–05ನೇ ವರ್ಷ ಎಂದು ನಾನು ಹೇಳುವುದಕ್ಕೆ ಇಷ್ಟಪಡುತ್ತೇನೆ. ರಾಜ್ಯದ ಇತಿಹಾಸದಲ್ಲಿ ಇದೊಂದು ದಾಖಲೆಯಾಗಿದೆ. 2004–05ನೇ ವರ್ಷ ವಸತಿ ನಿವೇಶನಗಳ ವಂಚಿತ ವರ್ಷವಾಗಿದೆ. ಅಧಿಕಾರ ವಿಕೇಂದ್ರಿಕರಣದಲ್ಲಿ ಜಿಲ್ಲಾಪಂಚಾಯತ್. ತಾಲ್ಲೂಕು ಪಂಚಾಯತ್. ಗ್ರಾಮ ಪಂಚಾಯಿತಿಗಳಿಗೆ ಹಣವನ್ನು ಕೊಡದೆ ಆ ವ್ಯವಸ್ಥೆಗೆ ತಿಲಾಂಜಲಿ ನೀಡಿ ಜನಪ್ರತಿನಿಧಿಗಳು ತಲೆತಗ್ಗಿಸಿ ಓಡಾಟ ಮಾಡುವಂಥ ಪರಿಸ್ಥಿತಿಯನ್ನು ನಾವು ಪ್ರತ್ಯಕ್ಷ ನೋಡಿದ್ದೇವೆ. ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳ ಹೆಸರನ್ನು ಹೇಳಿಕೊಂಡು ಬಂದಂಥ ಜನ ಅವರ ಹಿತವನ್ನು ಸಂಪೂರ್ಣ ಮರೆತು ಆಯವ್ಯಯದಲ್ಲಿ ತೆಗೆದಿಟ್ಟ ಹಣವನ್ನು ಖರ್ಚು ಮಾಡದೆ ಅವರ ಜೊತೆಗೆ ಚೆಲ್ಲಾಟ ನಡೆಸಿರುವಂಥದ್ದು ಕಾಣಬಹುದು. ಸತತ ನಾಲ್ಕು ವರ್ಷ ಬರಗಾಲಕ್ಕೆ ತುತ್ತಾದಂಥ ರೈತನ ಜೀವನದ ಜೊತೆ ಚೆಲ್ಲಾಟ. ಕೃಷಿ ಕಾರ್ಮಿಕನಿಗೆ ಉದ್ಯೋಗವಿಲ್ಲ. ಗ್ರಾಮಿಣ ಜನತೆಯ ಜೊತೆ ಒಂದು ರೀತಿ ಚಲ್ಲಾಟ ಸರ್ಕಾರದ ಕಡೆಯಿಂದ ನಡೆದಿದೆ. ಇದೊಂದು ನಿಷ್ಕ್ರಿಯ ಬೇಜವಾಬ್ದಾರಿಯುತವಾದ ಸರ್ಕಾರವಾಗಿದೆ. 2004–05ರ ಸಾಲಿನಲ್ಲಿ ಒಂದು ಆಶ್ರಯ ಮನೆಯನ್ನು ಸಹ ಮಂಜೂರು ಮಾಡಲಿಲ್ಲ. ಅಂಬೇಡ್ಕರ್ ಯೋಜನೆಯಲ್ಲಿ ಕೂಡ ಒಂದು ಮನೆಯನ್ನು ಸಹ ಕೊಡಲಿಲ್ಲ. ಹಾಗೆಯೇ ಬಡವರಿಗೆ ಒಂದು ನಿವೇಶನ ಸಹ ಕೊಡಲಿಲ್ಲ. ಇದು ಮಾನ್ಯ ಹಣಕಾಸಿನ ಸಚಿವರಿಗೆ ಗೊತ್ತಿರುವಂಥ ವಿಚಾರವಾಗಿದೆ. ಪ್ರಾಥಮಿಕ ಆರೋಗ್ಯ ಘಟಕವಾಗಲಿ ವೆಟರ್ನರಿ ಆಸ್ಪತ್ರೆಯಾಗಲಿ ಒಂದನ್ನು ಸಹ ಇಡೀ ರಾಜ್ಯದಲ್ಲಿ ಮಂಜೂರು ಮಾಡಲಿಲ್ಲ. ಇದಕ್ಕೆ ಸಂಬಂಧಪಟ್ಟಂಥ ಆಶ್ರಯ ಸಮಿತಿಯನ್ನು

ಮಾಡುವ ಸಲುವಾಗಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಇನ್ನೂ ಕೂಡ ಈ ಸರ್ಕಾರದಿಂದ ಆಗಲಿಲ್ಲ. ಈ ಬಗ್ಗೆ ವಿವರವಾಗಿ ಹೇಳುವ ಸಂದರ್ಭದಲ್ಲಿ ವಿವರಣೆ ಕೊಡುತ್ತೇನೆ. ಈ ಬಗ್ಗೆ ಗ್ರಾಮೀಣಾಭಿವೃದ್ಧಿ ಸಚಿವರ ಜೊತೆ ಚರ್ಚೆಯಾಯಿತು. ನನ್ನ ಹತ್ತಿರ ಅಂಕಿಅಂಶಗಳು ಇವೆ. ಮಾನ್ಯ ಹಣಕಾಸಿನ ಸಚಿವರು ಅಂಕಿಅಂಶಗಳನ್ನು ತರಿಸಿಕೊಂಡು ನನಗೆ ಉತ್ತರ ಕೊಡಬೇಕಾಗುತ್ತದೆ. ಶ್ರೀಮತಿ ಸೋನಿಯಾಗಾಂಧಿಯವರ ಹೆಸರು ಹೇಳಿ ಬೇಲೂರು ಘೋಷಣೆ ಮಾಡಿ ಜೈಕಾರ ಕೇಳಿಕೊಂಡು ಬಂದಂಥ ಜನ 2003–04ನೇ ಸಾಲಿನಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ರೂ 5 ಲಕ್ಷ ಕೊಡುತ್ತೇವೆಂದು ಹೇಳಿ ಅದರಲ್ಲಿ ನೀವು ಕೊಟ್ಟಿದ್ದು ರೂ 80 ಸಾವಿರ ಮಾತ್ರ. ಕೇವಲ 80 ಸಾವಿರ ಕೆಪಿಟಿಸಿಎಲ್‌ಗೆ ಅಡ್ಜಸ್ಟ್ ಮಾಡಿದ್ದು ಎಲ್ಲ ಸೇರಿಸಿದರೂ ರೂ ಎರಡೂವರೆ ಲಕ್ಷ ಆಗುವುದಿಲ್ಲ. 2003–04ರಲ್ಲಿ ನೇರವಾಗಿ ಅಭಿವೃದ್ಧಿ ಕಾರ್ಯಕ್ಕೆ ಕೊಟ್ಟದ್ದು ರೂ 5 ಲಕ್ಷದಲ್ಲಿ ಕೇವಲ ರೂ 80 ಸಾವಿರ. 2004–05ನೇ ಸಾಲಿಗೆ ರೂ 5 ಲಕ್ಷ ಕೊಡುತ್ತೇವೆಂದು ಹೇಳಿ ಅದರಲ್ಲಿ ರೂ 83 ಸಾವಿರ ಮಾತ್ರ ಕೊಡಲಾಗಿದೆ. ಕೆಪಿಟಿಸಿಎಲ್‌ಗೆ ಕೊಟ್ಟಿರುವುದನ್ನು ಸಹ ನೀವು ಅಡ್ಜಸ್ಟ್ ಮಾಡಿಕೊಂಡಿದ್ದೇವೆಂದು ಹೇಳಿದರೆ ಅದು ಹೆಚ್ಚುಕಡಿಮೆ ಈ ಎರಡು ವರ್ಷದಲ್ಲಿ ರೂ ಎರಡೂವರೆ ಲಕ್ಷ ಅಂದಾಜು ಇಟ್ಟುಕೊಳ್ಳಬಹುದು. ಇನ್ನುಳಿದ ರೂ ಎರಡೂವರೆ ಲಕ್ಷವನ್ನು ಅಭಿವೃದ್ಧಿ ಕಾರ್ಯಕ್ಕಾಗಿ ಗ್ರಾಮಪಂಚಾಯಿತಿಗಳಿಗೆ ಸರ್ಕಾರದಿಂದ ಕೊಡಲಿಲ್ಲ. ಅಭಿವೃದ್ಧಿ ಕಾರ್ಯಕ್ಕೆಂದು ಬಂದಂಥ ಹಣವನ್ನು ಕೆಪಿಟಿಸಿಎಲ್‌ಗೆ ಯಾವ ರೀತಿ ಒಳಗಡೆ ಅಡ್ಜಸ್ಟ್ ಮಾಡಿಕೊಂಡಿದ್ದಾರೆನ್ನುವುದು ಬಹಿರಂಗವಾದ ಮೇಲೆ, ಇದರಲ್ಲಿ ಒಳ ಒಪ್ಪಂದ ಅಡ್ಜಸ್ಟ್‌ಮೆಂಟ್ ಆಗಿರುವುದರ ಅಂಕಿಅಂಶಗಳನ್ನು ಆಮೇಲೆ ಹೇಳುತ್ತೇನೆ. ಇದು ಈ ಸಮ್ಮಿಶ್ರ ಸರ್ಕಾರದ ಒಂದು ರೀತಿಯ ದಾಖಲೆಯಾಗಿದೆ. ಶ್ರೀ ಮೋಹನ್ ಕೃಷ್ಣ ಶೆಟ್ಟಿಯವರಿಗೆ, 16.03.2005ರಂದು ಅವರ ಪ್ರಶ್ನೆಗೆ ಸರ್ಕಾರ ಏನು ಉತ್ತರ ಕೊಟ್ಟಿದ್ದಾರೆ ಎನ್ನುವುದನ್ನು ಹೇಳುತ್ತೇನೆ. '2004–05ನೇ ಸಾಲಿನ ವಸತಿ ಯೋಜನೆಯಡಿ ಆಶ್ರಯ ಮನೆಗಳ ನಿರ್ಮಾಣದ ಗುರಿ ನಿಗದಿಪಡಿಸಿರುವಷ್ಟು ಈ ವರೆಗೆ ನೀಡದಿರುವುದು ಸರ್ಕಾರದ ಗಮನದಲ್ಲಿದೆಯೇ ಎಂದು ಕೇಳಿದ್ದಕ್ಕೆ 'ಹೌದು' ಎಂದು ಉತ್ತರ ಕೊಟ್ಟಿದ್ದಾರೆ. ವಸತಿರಹಿತ ಕಡು ಬಡವರಿಗೆ ಈ ಯೋಜನೆಯ ಸವಲತ್ತು ಸಿಕ್ಕಿಲ್ಲ ಎಂದು ಹೇಳಿದ್ದಕ್ಕೆ ಸರ್ಕಾರದ ಕಡೆಯಿಂದ 'ಹೌದು' ಎಂದು ಒಪ್ಪಿಕೊಂಡಿದ್ದೀರಿ. ಫಲಾನುಭವಿಗಳ ಪಟ್ಟಿಯನ್ನು ಸಹ ಮಾಡಲಿಲ್ಲ. ಕನಿಷ್ಟ ಒಂದು ಸಾವಿರ ಮನೆಗಳು 2004–05ರಲ್ಲಿ ಬಡವರಿಗೆ ಸಿಕ್ಕುತಿತ್ತು ಅದೇನಾದರೂ ಮುಂದಿನ

ದಿನಗಳಲ್ಲಿ ಆ ಒಂದು ಸಾವಿರ ಮನೆ ಈ ವರ್ಷ ಕೊಡಬೇಕಾದ ಮನೆಗಳನ್ನು ಸೇರಿಸಿ ಕೊಡುತ್ತೀರೋ ಅಥವಾ ಅದಕ್ಕೆ ಪಂಗನಾಮ ಹಾಕುತ್ತೀರೋ ಎನ್ನುವುದು ಗೊತ್ತಿಲ್ಲ. ಆದರೆ ನೀವು ಆಶ್ರಯ ಅಂಬೇಡ್ಕರ್ ಯೋಜನೆಯಲ್ಲಿ ಒಂದು ಮನೆಯನ್ನು ಸಹ ಕೊಡಲಿಲ್ಲ. ನಾವು ನುಡಿದಂತೆ ನಡೆಯುವ ಸರ್ಕಾರ ಎಂದು ನೀವು ಹೇಳಿದ್ದೀರಿ. ಈ ಸಂದರ್ಭದಲ್ಲಿ ಸರ್ವಜ್ಞನ ಮಾತು ನೆನಪಾಗುತ್ತದೆ. ಸರ್ಕಾರದ ಕಡೆಯಿಂದ ನೀವು ಸಹ ಕೆಲವು ವಚನಗಳನ್ನು ಹೇಳಿದ್ದೀರಿ.

"ನುಡಿಯಲ್ಲಿ ಒಂದಾಗಿ ನಡೆಯಲ್ಲಿ ತಪ್ಪಿದರೆ

ಹಿಡಿದಿದ್ದ ಹಿಡಿನಾಗ ಮರಳಿ ಕಚ್ಚುವ ನೋಡ ಸರ್ವಜ್ಞ"

ಊಟದ ರುಚಿ ಊಟ ಮಾಡಿದ ನಂತರ ಗೊತ್ತಾಗುತ್ತದೆ. ಆಕರ್ಷಕವಾಗಿ ಜೋಡಿಸಿ ಅದು ಚೆನ್ನಾಗಿದೆಯಾ ಎಂದು ಕೇಳಿದರೆ ಅದಕ್ಕೆ ಏನು ಬೆಲೆ ಇಲ್ಲ. ಅದನ್ನು ಬೇಕಾದರೆ ಮ್ಯೂಸಿಯಂನಲ್ಲಿ ನೋಡುವುದಕ್ಕೆ ಇಡಬಹುದು. 2004–05ರ ಬಜೆಟ್ ಈ ರೀತಿ ಜನರ ದೃಷ್ಟಿಯಲ್ಲಿ ಆಗಿದೆ ಎನ್ನುವ ಮಾತನ್ನು ನಿಮಗೆ ಹೇಳುತ್ತಾ ಸನ್ಮಾನ್ಯ ಸಿದ್ದರಾಮಯ್ಯನವರು ಸ್ವಲ್ಪ ಲೋಹಿಯಾವಾದಿಗಳು. ಆ ಗರಡಿಯಲ್ಲಿ ಬೆಳೆದು ಪಳಗಿದವರಾದ ನೀವು ಸ್ವಲ್ಪ ಸೂಕ್ಷ್ಮವಾದಂಥ ವ್ಯಕ್ತಿಯಾಗಿದ್ದೀರಿ. 2004–05ರ ಆ ಮುಂಗಡ ಪತ್ರದಲ್ಲಿ ನೀವು ಏನು ಹೇಳಿದ್ದೀರಿ. ಅದನ್ನು ನೀವೇನಾದರೂ ಜ್ಞಾಪಕ ಮಾಡಿಕೊಂಡು ಪ್ರಗತಿ ಏನಾಗಿದೆ ಎಂದು ನೀವು ಯೋಚನೆ ಮಾಡಿದರೆ ನಿಮ್ಮ ಹೊಟ್ಟೆಯೇ ತೊಳಸಿ ಬಂದು "ಅಯ್ಯೋ. ಇಂಥ ಅನ್ಯಾಯವಾಯಿತಲ್ಲಾ" ಎಂದು ನಿಮಗೆ ಅನಿಸಬಹುದೆಂದು ನಾನಾದರೂ ತಿಳಿದುಕೊಂಡಿದ್ದೇನೆ. ಹಳಸಿ ಹೋಗಿದಂಥ ಯೋಜನೆಗಳಿಗೆ ಮತ್ತೊಂದು ಸಲ ಬಣ್ಣ ಹೊಡೆದು ರಂಗಿನ ಮುಂಗಡ ಪತ್ರವನ್ನು 2004–05ರಲ್ಲಿ ಕೊಟ್ಟು ಜೈ ಎಂದು ಹೇಳಿಸಿಕೊಳ್ಳುವಂಥ ಪ್ರಯತ್ನವನ್ನು ಮಾಡಿದಿರಿ. ಅದಕ್ಕೆ ನಾನು ಪ್ರಾರಂಭದಲ್ಲಿ ಹೇಳಿದೆ. ಈ ಮುಂಗಡ ಪತ್ರ 2004–05 ಮತ್ತು 2005–06 ನೋಡಿದಾಗ ಇದ್ದರಲ್ಲಿ ಒಂದು ಈಗಾಗಲೇ ಅನುಭವಕ್ಕೆ ಬಂದಿದೆ. ಹಾಗೆಯೇ ಇದನ್ನು ನೋಡಿದಾಗ ನಾನು ಆಗಲೇ ಹೇಳಿದ ಹಾಗೆ "ಈ ಬೆಳ್ಳಿ ತಟ್ಟೆಯಲ್ಲಿ ಕಪ್ಪೆ ಇಟ್ಟುಕೊಟ್ಟರೆ ಏನಾಗುತ್ತದ್ದೋ ಆ ತರಹ ಭಾವನೆ ಜನರಿಗೆ ಬರುತ್ತಿದೆ. ನಿಮ್ಮ ಬಜೆಟ್ ಭಾಷಣದಲ್ಲಿ ತಾವು ಹೇಳಿದ್ದೀರಿ. ಕೋಮು ಸೌಹಾರ್ದತೆಯ ಸ್ಥಾಪನೆ ಮಾಡಿದ ಹೆಮ್ಮೆ ಈ ಸರ್ಕಾರಕ್ಕಿದೆ ಎಂದು ಹೇಳುತ್ತಾ ಬಜೆಟ್‌ನ್ನು ಪ್ರಾರಂಭ ಮಾಡಿದ್ದೀರಿ. ಮೊದಲು ವಾಕ್ಯವನ್ನೇ ನೀವು ಹೇಳಿರುವುದಕ್ಕೆ "ದತ್ತ ಜಯಂತಿ ಆಚರಿಸಿದ್ದು' ಎಂದು ಹೇಳಿದ್ದೀರಿ.

ದತ್ತ ಜಯಂತಿ ನಡೆಸಿದ ರೀತಿ ಹೇಗಿತ್ತು? ನಿಮಗೆ ನೀವೇ ಭುಜ ತಟ್ಟಿಕೊಳ್ಳುವ ಕ್ರಮ ಯಾವ ರಾಜಧರ್ಮ? ಬಹು ಸಂಖ್ಯಾತರನ್ನು ಬಡಿದು ಓಟಿಗಾಗಿ ಅಲ್ಪಸಂಖ್ಯಾರನ್ನು ಹಿಗ್ಗಿಸುವಂಥ ಕ್ರಮ ಅದು ಸಾಮಾಜಿಕ ನ್ಯಾಯವೆಂದು ನೀವು ಹೇಳುತ್ತೀರಾ? ಅದನ್ನು ನಾವು ನಂಬಬೇಕೇ? ನಮ್ಮ ನಡೆ. ನುಡಿಯಲ್ಲಿ ಮಾತು, ಕೃತಿಯಲ್ಲಿ ಅಂತರ ಇಲ್ಲವೆಂದು ನೀವು ಹೇಳುತ್ತೀರಿ. ಹಿಂದಿನ ಆಯವ್ಯಯದ ಕನಸುಗಳು ನನಸಾಗಿವೆ ಎಂದು ಹೇಳುತ್ತೀರಿ. ನಿಮ್ಮ ಕನಸು ನನಸಾಗಿರಬಹುದು. ಜನರ ಕನಸುಗಳು ಮಾತ್ರ ಹಾಗೇ ಇವೆ. ಆರ್ಥಿಕ ಸ್ಥಿರತೆ ಆಯವ್ಯಯದಲ್ಲಿ ಎದ್ದು ಕಾಣುತ್ತಿದೆ ಎಂದು ಹೇಳುತ್ತೀರಿ. ನಿಮ್ಮ ದೃಷ್ಟಿಯಲ್ಲಿ ಸ್ಥಿರತೆ ಜನರ ದೃಷ್ಟಿಯಲ್ಲಿ ಇನ್ನೆಂದೂ ಕಾಣದ ಆರ್ಥಿಕ ಅಸ್ಥಿರತೆ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ತಾವು ದತ್ತ ಜಯಂತಿ ಮಾಡುವ ಮೂಲಕ ಅಲ್ಪಸಂಖ್ಯಾತರನ್ನು ತೃಪ್ತಿಪಡಿಸಿ ಬಹು ಸಂಖ್ಯಾತರಿಗೆ ಅಪಮಾನ ಮಾಡಿ ನಾವು ಸಾಧನೆ ಮಾಡಿದ್ದೇವೆಂದು ಹೇಳುತ್ತೀರಿ. ಆ ಸಾಮಾಜಿಕ ನ್ಯಾಯಕ್ಕೆ ಒಂದು ನೀತಿ ನಿಘಂಟು ಇರಬೇಕಲ್ಲವೇ? ಹಣಕಾಸು ಸಚಿವರಿಗೆ ನಾನೊಂದು ಮಾತನ್ನು ಹೇಳುತ್ತೇನೆ, ನೀವು ನಿಜವಾಗಲೂ ಪರೀಕ್ಷೆ ಮಾಡಬೇಕೆಂದರೆ. ಈ ದತ್ತ ಜಯಂತಿ ವಿಚಾರವಾಗಿ ಒಂದು ಸಾಮಾಜಿಕ ನ್ಯಾಯ ಸಿಕ್ಕಿತ್ತೋ? ಇಲ್ಲವೋ? ಎನ್ನುವ ಬಗ್ಗೆ ಜನ ಮತ ಗಣನೆ ಬೇಕಾದರೆ ಆಗಲಿ. ನಾನು ಆ ಸವಾಲು ಸ್ವೀಕಾರ ಮಾಡುವುದಕ್ಕೆ ಸಿದ್ಧವಿದ್ದೇವೆ. ರಾಜ್ಯದಲ್ಲಿ ತೀರ್ಮಾನವಾಗಲಿ. ಹೇಗೆ ನಡೆಯಿತು? ಬೆನ್ನಿಹಿನ್ ಅನ್ನು ಕರೆದುಕೊಂಡು ಬಂದು ಬಹು ಸಂಖ್ಯಾತ ಹಿಂದೂ ಸಮಾಜಕ್ಕೆ ಅಪಮಾನ ಮಾಡುವ ವ್ಯಕ್ತಿಯನ್ನು ಕರೆದುಕೊಂಡು ಬಂದು. ಎಲ್ಲ ವಿಧವಾದ ವಿಗ್ರಹಾರಾಧನೆ ವ್ಯಭಿಚಾರ ಅದಕ್ಕೆ ಸಮ ಎಂದು ಹೇಳಿದ ವ್ಯಕ್ತಿಯನ್ನು ಕರೆದುಕೊಂಡು ಬಂದು, ಮತಾಂತರಕ್ಕೆ ಅವಕಾಶ ಕೊಟ್ಟು ಬಹು ಸಂಖ್ಯಾತ ಹಿಂದೂ ಸಮಾಜದ ಜೊತೆಗೆ ಮುಖ್ಯಮಂತ್ರಿಗಳೇ ಆ ಕಾರ್ಯಕ್ರಮದಲ್ಲಿ ಹೋಗಿ ಕುಳಿತು ಅದಕ್ಕೆ ಬೆನ್ನು ತಟ್ಟುವ ಕೆಲಸ ತಾವು ಮಾಡಿದ್ದೀರಿ. ದತ್ತ ಜಯಂತಿಗೆ ಭಕ್ತಾದಿಗಳನ್ನು ಬಾರದ ಹಾಗೆ ನೋಡಿಕೊಂಡರು. ಆ ಜಿಲ್ಲಾಧಿಕಾರಿ ಎಸ್.ಪಿ. ಒಂದು ರೀತಿ ತಾಂಡ ನೃತ್ಯ ಮಾಡಿ ಯಾರೂ ಹತ್ತಿರ ಬಾರದ ಹಾಗೆ ನೋಡಿಕೊಂಡ ವ್ಯಕ್ತಿಗೆ ಶಾಭಾಷ್‌ಗಿರಿ ಕೊಟ್ಟಿರಿ. ಈಗ ಮಂಡೂಕ ನ್ಯಾಯವನ್ನು ಒಂದು ಸಾಮಾಜಿಕ ನ್ಯಾಯವೆಂದು ಜನರ ಮೇಲೆ ಹೇರುವುದು ಯಾವ ಸೀಮೆ ನ್ಯಾಯ ಎಂದು ಸಿದ್ದರಾಮಯ್ಯನವರನ್ನು ಕೇಳುವುದಕ್ಕೆ ನಾನು ಇಚ್ಛೆಪಡುತ್ತೇನೆ. ಯೋಜನೇತರ ವೆಚ್ಚ ಕಡಿಮೆ ಮಾಡುವುದಕ್ಕೆ ಕೇವಲ ಭರವಸೆ ಮಾತನ್ನು ಹೇಳಿದ್ದೀರಿ. ವ್ಯರ್ಥವಾದ ಇಲಾಖೆಗಳು. ವ್ಯರ್ಥವಾದ ನಿಗಮಗಳು.

ಅನಾವಶ್ಯಕ ವೆಚ್ಚಗಳು. ನಿಮ್ಮ ಅತೃಪ್ತ ಶಾಸಕರಿಗೆ. ನಿಮ್ಮ ರಾಜಕೀಯ ಪಕ್ಷದ ಮುಖಂಡರಿಗೆ ಮುಳುಗಿ ಹೋಗುತ್ತಿರುವ ನಿಗಮಗಳಲ್ಲಿ ಛೇರ್ಮನ್‌ಗಿರಿ ಕೊಡಿಸುವುದಕ್ಕೆ ನಮ್ಮ ಮುಖ್ಯಮಂತ್ರಿಗಳು ಮೊನ್ನೆ ಅಧಿವೇಶನ ನಡೆಯಬೇಕಾದರೆ ಡೆಲ್ಲಿಗೆ ಹೋಗಿ ಬರುತ್ತಾರೆ. ಮುಳುಗಿ ಹೋಗುತ್ತಿರುವ ನಿಗಮ–ಮಂಡಳಿಗೆ ಅಧ್ಯಕ್ಷರನ್ನು ನೇಮಕ ಮಾಡುವ ಅಗತ್ಯತೆ ಇದೆಯೇ? ಎಂದು ಆರ್ಥಿಕ ಸಚಿವರೆ ನಾನು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅಡ್ಮಿನಿಸ್ಟ್ರೇಷನ್ ಸಂಪೂರ್ಣವಾಗಿ ಬಿಗಿ ತಪ್ಪಿ ಹೋಗಿದೆ. Dignity of the office has come down. ಅಧಿಕಾರಿಗಳ ಸಭೆ ಮಾತ್ರವಾಗುತ್ತದೆ. ಅವರಿಗೆ ಏನೂ ತೀರ್ಮಾನ ತೆಗೆದುಕೊಳ್ಳುವುದಕ್ಕೆ ನೀವು ಬಿಡುತ್ತಿಲ್ಲ. ನಕ್ಸಲೀಯ ಚಟುವಟಿಕೆ ಒಂದು ಮೂವ್‌ಮೆಂಟ್ ಎಂದು ಹೇಳುವ ಸ್ಥಿತಿಗೆ ಮುಖ್ಯಮಂತ್ರಿಗಳು ಬಂದಿದ್ದಾರೆ. ಈ ರೀತಿ ಒಂದು ಆಡಳಿತವನ್ನು ನಡೆಸುವ ಪ್ರಯತ್ನ ಮಾಡಿದ್ದೀರಿ. ಕರ್ನಾಟಕದಲ್ಲಿ 176 ತಾಲ್ಲೂಕುಗಳ ಪೈಕಿ 98 ತಾಲ್ಲೂಕುಗಳಲ್ಲಿ ಸಾಧಾರಣಕ್ಕಿಂತ ಕಡಿಮೆ ಮಳೆಯಾಗಿದೆ ಎಂದು ವರದಿಯಲ್ಲಿ ಕೊಟ್ಟಿದ್ದೀರಿ. ಆದರೆ. ಆ ಬರಗಾಲಕ್ಕೆ ತುತ್ತಾದ ರೈತನ. ಕೃಷಿಕಾರ್ಮಿಕನ ನೆರವಿಗೆ ಬರುವುದಕ್ಕೆ ಸಂಪೂರ್ಣವಾಗಿ ತಾವು ವಿಫಲರಾಗಿದ್ದೀರಿ. ಕೇಂದ್ರ ಸರ್ಕಾರದಿಂದ ಯಾವ್ಯಾವ ಬಾಬಿಗೆ ಎಷ್ಟೆಷ್ಟು ಅನುದಾನ ಬಂದಿದೆ? ಮ್ಯಾಚಿಂಗ್ ಗ್ರಾಂಟ್ ತಾವೇನು ಕೊಡುತ್ತೀರಿ? ಎಷ್ಟೆಷ್ಟು ಖರ್ಚಾಗಿದೆ? ಹಣಕಾಸು ಸಚಿವರಾಗಿ ತಾವು ಚರ್ಚೆಗೆ ಬೇರೆ ಸದಸ್ಯರಿಗೆ ಅನುಕೂಲವಾಗುವ ರೀತಿ ಆ ವರದಿಯನ್ನು ಇವತ್ತು ನಾಳೆ ಇಟ್ಟರೆ. ಯಾವ ರೀತಿ ನಿಮ್ಮ ರಾಜಕೀಯ ಗೊಂದಲದಲ್ಲಿ ಮುಳುಗಿ ರಾಜ್ಯದ ಅಭಿವೃದ್ಧಿ ಕಾರ್ಯವನ್ನು ಸಂಪೂರ್ಣ ಕಡೆಗಣಿಸಿ ಕೇಂದ್ರ ಸರ್ಕಾರ ಕೊಟ್ಟ ಅನುದಾನವನ್ನು ಖರ್ಚು ಮಾಡುವುದಕ್ಕೆ ನೀವು ಸಿದ್ಧರಿಲ್ಲದೆ. ರಾಜ್ಯದ ಜನತೆಗೆ ಅನ್ಯಾಯ ಮಾಡಿದ್ದೀರಿ ಇದು ಬಹಳ ಸ್ಪಷ್ಟವಾಗಿ ಕಾಣುತ್ತದೆ. ಕುಡಿಯುವ ನೀರಿನ ಸಮಸ್ಯೆಯನ್ನು ನೀವು ಬಗೆಹರಿಸುವ ರೀತಿಯನ್ನು ನೋಡಿದಾಗ ನರಸಿಂಹಸ್ವಾಮಿಗಳ ಕವನದ ಸಾಲು ನೆನಪಾಗುತ್ತದೆ. "ಬರಿಗೊಡಗಳಿಗೆ ಸಮಾಧಾನ ಹೇಳುತ್ತಿದೆ ನೀರಿಲ್ಲದ ನಲ್ಲಿ" ಇದು ಅವರು ಹೇಳುವ ಮಾತು. ಇಡೀ ರಾಜ್ಯದಲ್ಲಿ ಕೆರೆಕಟ್ಟೆಗಳು ಬತ್ತಿ ಹೋಗಿವೆ. ಅಂತರ್ಜಲ ಕುಸಿದಿದೆ. ವಿದ್ಯುತ್ ಕ್ಷಾಮ ನಮ್ಮನ್ನು ಕಿತ್ತು ತಿನ್ನುತ್ತಿದೆ. ಈ ಕುಡಿಯುವ ನೀರಿನ ವ್ಯವಸ್ಥೆ ಮಾಡುವುದಕ್ಕೆ ಕಳೆದ 3–4 ತಿಂಗಳಲ್ಲಿ ಸಂಪೂರ್ಣವಾಗಿ ತಾವು ವಿಫಲವಾಗಿದ್ದೀರಿ. ಆದರೆ, ಕುಡಿಯುವ ನೀರಿನ ವ್ಯವಸ್ಥೆ ಬಹಳ ಚೆನ್ನಾಗಿ ಮಾಡಿದ್ದೇವೆ ಎಂದು ಬಡ್ಜೆಟ್‌ನಲ್ಲಿ ತಾವು ಹೇಳಿಕೊಂಡಿದ್ದೀರಿ. ಶಿಕ್ಷಣ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಅಕ್ಷರ ದಾಸೋಹ ಇದರ ಬಗ್ಗೆ ಸುದೀರ್ಘವಾಗಿ ತಾವು ಪ್ರಸ್ತಾಪ ಮಾಡಿದ್ದೀರಿ.

ಬಡ ಮಕ್ಕಳಿಗೆ ಇದರಿಂದ ಒಳ್ಳೆಯದಾಗುತ್ತದೆ. ಅದರ ಬಗ್ಗೆ ಯಾವುದೇ ತಕರಾರು ಇಲ್ಲ. ಆದರೆ. ಶಿಕ್ಷಣ ಮಟ್ಟವನ್ನು ಸುಧಾರಿಸುವ ಯಾವುದೇ ಕಾರ್ಯಕ್ರಮವನ್ನು ತಾವು ಯೋಚಿಸಲಿಲ್ಲ. ನೀವು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಪ್ರಸ್ತಾಪ ಮಾಡಿದ್ದೀರಿ. ನೀರೇ ಇಲ್ಲ. ನೀವು ನೀರಿಲ್ಲವೆಂದು ಹೇಳುತ್ತೀರಿ. ಇಲ್ಲದ ನೀರನ್ನು ಹೇಗೆ ತಂದು ಕೊಟ್ಟಿರಿ? ಏನಾದರೂ ಜಾದೂ ಮಾಡಿದ್ದೀರಾ? ಯಾವುದೇ ಊರಿಗೆ ಹೋಗಿ ಎಲ್ಲಿ ಹೋದರು ಕೆಟ್ಟು ನಿಂತಿರುವ ಬೋರವೆಲ್‌ಗಳು. ನೀರಿಲ್ಲದ ಬಾವಿಗಳು. ಬತ್ತಿ ಹೋಗಿರುವ ಕೆರೆಗಳು. ಅಂತರ್ಜಲ ಕುಸಿದಿದೆ. ಸರ್ಕಾರಿ ಲೆಕ್ಕದಲ್ಲಿ ಕಂಟ್ರಾಕ್ಟರ್‌ಗಳ ಮೂಲಕ ನೀರು ಕೊಡಿಸುವ ಕೆಲಸ. ಖರ್ಚು ಮಾಡುವುದನ್ನು ನೀವು ಮಾಡಿರಬಹುದೆ ಹೊರತು ನಲ್ಲಿ ಮುಂದೆ ಖಾಲಿ ಬಕೆಟ್ಟುಗಳು. ಬಿಂದಿಗೆಗಳು ಹಾಗೇ ಇವೆ ಎನ್ನುವ ಮಾತನ್ನು ನೊಂದು ನಿಮಗೆ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ನೀವು ಮಾಡಿದ ಕೆಲಸ ಒಂದು ಸಾಧನೆ ಈ ವರ್ಷ ವಾಟಾಳ್ ನಾಗರಾಜ್‌ರವರೆ ಎಂದರೆ ನಿರಂತರವಾಗಿ ಆದ ವರ್ಗಾವಣೆ. 15–15 ದಿವಸಗಳಿಗೆ ಬದಲಾವಣೆ. ನಾನು ಕಳೆದ 20 ವರ್ಷಗಳಿಂದ ಈ ಸದನದಲ್ಲಿ ಕೆಲಸ ಮಾಡಿದ್ದೇನೆ. ಮಾಜಿ ಮುಖ್ಯಮಂತ್ರಿಗಳು. ಮಾಜಿ ಶಾಸಕರು. ಮಾಜಿ ಲೋಕ ಸಭಾ ಸದಸ್ಯರು. ಪಕ್ಷದ ಮಾಜಿ ಮುಖಂಡರು ಹೇಳಿದಂತೆ ವರ್ಗಾವಣೆ ಮಾಡುವ ದಂಧೆಯನ್ನು ಹಿಂದೆ ಯಾರೂ ಮಾಡಿರಲಿಲ್ಲ. ಅವರಿಗಾದರೂ ಅನ್ನಿಸಬೇಕಾಗಿತ್ತು. ನಾನೊಬ್ಬ ಉನ್ನತ ಸ್ಥಾನದಲ್ಲಿ ಒಬ್ಬ ಮಾಜಿ ಮುಖ್ಯಮಂತ್ರಿಯಾಗಿದ್ದೆ. ಸಂಸತ್ ಸದಸ್ಯನಾಗಿದ್ದೆ. ಮಂತ್ರಿಯಾಗಿದ್ದೆ. ಜನರು ತಿರಸ್ಕಾರ ಮಾಡಿದ್ದಾರೆ. ಹಾಲಿ ಶಾಸಕರು ಸ್ವತಂತ್ರವಾಗಿ ಕೆಲಸ ಮಾಡುವುದಕ್ಕೆ ಬಿಡೋಣವೆಂದು ಕಿವಿ ಮಾತು ಹೇಳದೆ. ಅವರ ಕೈಗೊಂಬೆಯಂತೆ ವರ್ತನೆ ಮಾಡಿ ಚುನಾಯಿತ ಶಾಸಕರು ಯಾವುದೇ ಪಕ್ಷದವರು ಇರಲಿ. ಬಹುಶಃ ರಾಜ್ಯದ ಇತಿಹಾಸದಲ್ಲಿ 79 ಜನ ಶಾಸಕರು ಉಳಿದ ನಮ್ಮ ಎಲ್ಲ ಸ್ನೇಹಿತರು ಸೇರಿ ಇಷ್ಟು ದೊಡ್ಡ ಪ್ರಮಾಣದಲ್ಲಿ ನಾನು ಯಾರೂ ಕುಳಿತಿರಲಿಲ್ಲ. ಅಂಥ ಶಾಸಕರನ್ನು ಕಡೆಗಣಿಸಿ ನಿಮ್ಮ ಯಾವುದೇ ಒಂದು ಕಾರ್ಯಕ್ರಮ ಮಾಡಿದರು ಎಲ್ಲಿ ಪ್ರತಿಪಕ್ಷಕ್ಕೆ ಅನುಕೂಲವಾಗುತ್ತದೋ ಎನ್ನುವ ಒಂದೇ ಒಂದು ಕಾರಣಕ್ಕೋಸ್ಕರ ಕಿರುಕುಳ ಕೊಡುವ ಪ್ರಯತ್ನವನ್ನು ನೀವು ಮಾಡುತ್ತಿದ್ದೀರಿ. ಇದು ಸರಿಯೇ? ಎಂದು ನಿಮ್ಮನ್ನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಆನ್‌ಲೈನ್ ಲಾಟರಿ ನಿಷೇಧ ಮಾಡಿದ್ದೇನೆಂದು ಹೇಳುತ್ತೀರಿ. ನಿಷೇಧ ಮಾಡಿದ್ದೀರಿ. ಅದು ಪುಸ್ತಕದಲ್ಲಿದೆ. ಆನ್‌ಲೈನ್ ಲಾಟರಿ ಇಲ್ಲದೇ ಇರಬಹುದು. ಅದರ ನೆರಳಿನಲ್ಲಿ ಮಾರಿಗೊಂದು ಲಾಟರಿ ನಡೆಯುತ್ತಿದೆ. ನೀವು ಬನ್ನಿ ಎಲ್ಲಿ ಬೇಕಾದರೂ ನಾನು ತೋರಿಸುತ್ತೇನೆ. ಹೆಸರು ಬದಲಾಗಿದೆ. ಲಾಟರಿ ಮಾತ್ರ ನಿಂತಿಲ್ಲ. ಇದು ಶಾಪವೋ? ವರವೋ? ಸನ್ಮಾನ್ಯ

ಸಿದ್ದರಾಮಯ್ಯನವರೆ ಹೇಳಬೇಕೆಂದು ನಾನು ಇಷ್ಟಪಡುತ್ತೇನೆ. ರಾಜ್ಯದ ಜನರ ಸ್ಥಿತಿ ಎಷ್ಟು ಹದಗೆಟ್ಟಿದೆ ಎನ್ನುವುದನ್ನು ನಾನು ನಿಮಗೆ ಉದಾಹರಣೆ ಕೊಡುತ್ತೇನೆ. ನೀವು ಶೇಕಡ 6ರಂತೆ ಕೋ-ಆಪರೇಟೀವ್ ಲೋನ್ ಕೊಡಿಸುತ್ತೇವೆಂದು ಹೋದ ಬಡ್ಜೆಟ್‌ನಲ್ಲಿ ಹೇಳಿದ್ದೀರಿ. ನೀವು 60 ಕೋಟಿ ತೆಗೆದು ಇಟ್ಟಿದ್ದೀರಿ. ಇದುವರೆಗೆ 15-20 ಕೋಟಿ ರೂಪಾಯಿ ತೆಗೆದಿಲ್ಲ. ಖರ್ಚು ಮಾಡಿಲ್ಲ ಏಕೆ? 60 ಅಲ್ಲ 30 ಕೋಟಿ ರೂಪಾಯಿ. ಅಂದರೆ ಏಕೆ? ನಾನು ಇವತ್ತು ನಿಮ್ಮನ್ನು ದೂರುತ್ತಿಲ್ಲ. ನಮ್ಮ ರಾಜ್ಯದ ರೈತ ಸಾಲ ಕಟ್ಟಿ ತಾನೇ ಸಾಲ ತೆಗೆದುಕೊಂಡ ಮೇಲೆ ತಾನೆ ಕನ್‌ಸೆಷನ್ ಸಿಗುವುದು. ನೀವು 200 ಕೋಟಿ ರೂಪಾಯಿ ಕೊಟ್ಟಿದ್ದರೂ ಅದು ಮುಗಿಯಬೇಕು. ಕೊಟ್ಟ 60 ಕೋಟಿ ರೂಪಾಯಿಗಳಲ್ಲಿ ನೀವೇ 25-30 ಕೋಟಿ ರೂಪಾಯಿ ಖರ್ಚಾಗಿದೆ ಅಂದರೆ ರೈತ ಸಾಲ ಕಟ್ಟಿ ಸಾಲ ತೆಗೆದುಕೊಳ್ಳುವುದಕ್ಕೆ ಡಿಸಿಸಿ ಬ್ಯಾಂಕ್ ಮುಂದೆ ಅವನಿಗೆ ಬರುವುದಕ್ಕಾಗುತ್ತಿಲ್ಲ. ಕೋ-ಆಪರೇಟಿವ್ ಮುಂದೆ ಬರುವುದಕ್ಕಾಗುತ್ತಿಲ್ಲ. ಡಿಸಿಸಿ ಬ್ಯಾಂಕ್. ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ ಬಗ್ಗೆ ನಾನು ಮಾತನಾಡುತ್ತಿಲ್ಲ.

ನಾನು ಜಿಲ್ಲಾ ಬ್ಯಾಂಕ್ ಬಗ್ಗೆ ಮಾತನಾಡುತ್ತಿದ್ದೇನೆ. ಅಂದರೆ ಯಾವ ರೀತಿಯಾಗಿ ಈ ರಾಜ್ಯದ ರೈತ ದಯನೀಯವಾದ ಪರಿಸ್ಥಿತಿಯಲ್ಲಿ ಇದ್ದಾನೆ ಎನ್ನುವುದಕ್ಕಾಗಿ ನಾನು ಈ ಉದಾಹರಣೆಯನ್ನು ತಮಗೆ ಕೊಡುವುದಕ್ಕೆ ಬಯಸುತ್ತೇನೆ. ನಿಮ್ಮ ಬಜೆಟ್‌ನಲ್ಲಿ ಯಾರೋ ಚಿಂತನೆ ಮಾಡಿ ಬಹಳ ಒಳ್ಳೆಒಳ್ಳೆಯ ಶಬ್ದಗಳನ್ನು ಹಾಕಿಸಿದಿರಿ. ಕೇಳಿ. "ಸಾಮಾಜಿಕ ಚಿಂತನೆ ನಿಜ ರೂಪ ತಳೆದಿದೆ" ಇದು ನಿಜವಾಗಿದ್ದರೆ ದ್ಯಾವಲಾಪುರದ ಘಟನೆ ಏಕೆ ಆಗುತ್ತಿತ್ತು? " ಸಮಾನ ಬೆಳವಣಿಗೆ ಆರ್ಥಿಕ ವೃದ್ಧಿ ನಮ್ಮ ಆಶಯ" ಎಂದು ತಾವು ಹೇಳಿದಿರಿ. ಇದರಲ್ಲಿ ಕಾಗುಣಿತ ತಪ್ಪಾಗಿರಬಹುದು. "ಅಸಮಾನ ಬೆಳವಣಿಗೆ" "ಸ್ವಂತ ಆರ್ಥಿಕ ವೃದ್ಧಿ" ಎನ್ನುವ ಆಶಯ ಪೂರ್ಣವಾಗಿರಬಹುದೇ ಹೊರತು "ಸಮಾನ ಬೆಳವಣಿಗೆ ಆರ್ಥಿಕ ವೃದ್ಧಿ" ಆಗಿದೆ ಎಂದು ನನಗೇನೂ ಅನ್ನಿಸುವುದಿಲ್ಲ. ನಿಮಗೆ ಯಾರೋ ಹೇಳಿಕೊಟ್ಟರೋ ಅದನ್ನೆ ತಿಳಿದುಕೊಳ್ಳುವ ಪ್ರಯತ್ನ ಮುಂದಿದೆ. ಏಕೆಂದರೆ ಮೊದಲ ಬಾರಿಗೆ ಬಜೆಟ್‌ನಲ್ಲಿ ನಮ್ಮನ್ನು ಅಡ್ಡದಾರಿಗೆ ಹಿಡಿಸುವುದಕ್ಕೆ ದೊಡ್ಡ ದೊಡ್ಡ ಶಬ್ದಗಳನ್ನು ಹಾಕಿದಾಕ್ಷಣಕ್ಕೆ ನೀವು ಉಪ ಮುಖ್ಯಮಂತ್ರಿಗಳಲ್ಲದೆ. ಪ್ರತಿ ಪಕ್ಷದವರು ಎಂದು ಈ ಕಡೆ ಕುಳಿತು. 2004-2005ನೇ ಸಾಧನೆ ಏನಾಗಿದೆ ಎಂದು ಏನು ಹೇಳಿದರು. ಅದನ್ನು ಯೋಚನೆ ಮಾಡುವುದಕ್ಕೆ ನೀವು ಪ್ರಯತ್ನ ಮಾಡುವುದಾದರೆ. ನಾನು ಏನು ಹೇಳುತ್ತೇನೆಂದರೆ.

ಕರ್ನಾಟಕ ರಾಜ್ಯದ ಇತಿಹಾಸದಲ್ಲಿ 2004–2005ನೇ ವರ್ಷ ಅದೊಂದು ಅಭಿವೃದ್ಧಿ ಕುಂಠಿತ ವರ್ಷ. ಇದೊಂದು ನಿಮ್ಮ ಸಮ್ಮಿಶ್ರ ಸರಕಾರದ ಏಳಿಗೆ ಎಂದು ನೀವು ಹೇಳಿಕೊಳ್ಳಬಹುದು. ನೀವು ಬೇಕಾದರೆ ಬುಜ ತಟ್ಟಿಕೊಳ್ಳಬಹುದು. ನಾನು ಬೇಕಾದರೆ ಅಂಕಿ ಅಂಶಗಳನ್ನು ಕೊಡುತ್ತೇನೆ. ಯಾವುದಾದರೊಂದು ಅಂಕಿ ಅಂಶವನ್ನು ನೀವು ಡಿಸ್‌ಪ್ಯೂಟ್ ಮಾಡಿ ನೋಡೋಣ. ಯಾವುದೇ ಪರೀಕ್ಷೆಯೂ ಅಗತ್ಯವಿಲ್ಲ. "ಮಾತು ಕೃತಿಗಳಲ್ಲಿ ಅಂತರವಿಲ್ಲದ ನಡಿಗೆ ನಮ್ಮದು" ಎಂದು ಹೇಳಿದ್ದೀರಿ. ನಾನು ಹೇಳುತ್ತೇನೆ. ಮಾತು ಕೃತಿಗಳಲ್ಲಿ ಅಂತರ ಎದ್ದು ಕಾಣುವಂಥ ನಡಿಗೆ ಇದೆ. ಪ್ರತಿ ಕ್ಷಣಕ್ಕೆ ಪ್ರತಿ ವ್ಯಕ್ತಿಗೆ ನಮ್ಮ ಶಾಸಕರಿಗೆ ಈ ಅನುಭವ ಆಗಿದೆ. ವೈಯಕ್ತಿಕವಾಗಿ ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ನನಗೆ ಗೌರವ ಇದೆ. ನಾನು ಅವರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಮೊದಲ ಬಾರಿಗೆ ರಾಜ್ಯದ ಹಣಕಾಸಿನ ದೃಷ್ಟಿಯಿಂದ ಸೋರಿ ಹೋಗುತ್ತಿದ್ದದ್ದನ್ನು ಸ್ವಲ್ಪ ಬಿಗಿ ಮಾಡಿ ಹೆಚ್ಚು ತೆರಿಗೆಯನ್ನು ಸಂಗ್ರಹ ಮಾಡುವುದರಲ್ಲಿ ನೀವು ಯಶಸ್ವಿಯಾಗಿದಿರಿ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಹಣ ಎಲ್ಲಿ ಹೋಯಿತು? ಅದು ಯಾವ ರೀತಿ ಉಪಯೋಗವಾಯಿತು. ಕರ್ನಾಟಕದ ಜನತೆಗೆ ಅದು ಯಾವ ರೀತಿ ಉಪಯೋಗವಾಯಿತು ಎನ್ನುವುದೇ ನಮ್ಮ ಪ್ರಶ್ನೆ. ರಾಜ್ಯದ ಜನತೆಗೆ ಅನ್ಯಾಯವಾಗಿದೆ ಎನ್ನುವ ಮಾತನ್ನು ನಾನು ನೇರವಾಗಿ ಅದು ನಿಮ್ಮ ಕಾಲದಲ್ಲಿ ಆಗಿದೆ ಎಂದು ನಾನು ಹೇಳುತ್ತೇನೆ. ಕೊನೆಯ ಪುಟದಲ್ಲಿ "ಸಮಾನತೆಯ ಸಮಾಜ–ಚೈತನ್ಯಶೀಲ ಕರ್ನಾಟಕ ನಮ್ಮ ಮುಂದಿನ ಗುರಿ" ಎಂದು ಹೇಳಿದಿರಿ. ಆದರೆ ನಾನು ಏನು ಹೇಳುತ್ತೇನೆಂದರೆ. "ಅಸಮಾನತೆಯ ಸಮಾಜ ಚೈತನ್ಯರಹಿತ ಕರ್ನಾಟಕ" ಮಾಡುವ ಗುರಿ ಏನಾದರೂ ಇದೆಯೇ ಮತ್ತೆ ಮುಂದುವರೆದು "ದೂರದಿಂಗತದಲ್ಲಿ ಹೊಂಗಿರಣಗಳು ಕಾಣುತ್ತಿದೆ" ಎಂದು ಹೇಳಿದಿರಿ. ಜನರ ದೃಷ್ಟಿಯಲ್ಲಿ "ದೂರದ ಬೆಟ್ಟ ನುಣ್ಣಗೆ" ಎನ್ನುವ ಹಾಗೆ. ಎಲ್ಲರೂ ದೂರವನ್ನೇ ತೋರಿಸುವುದು ಹತ್ತಿರ ಬಂದಾಗಲೇ ವಾಸ್ತವ ಸ್ಥಿತಿ ಏನೆಂಬುದು ಗೊತ್ತಾಗುವುದು. 2004–2005ರ ಬಜೆಟ್ ಹತ್ತಿರ ಹೋಗಿ ನೋಡಿ ಜಿಗುಪ್ಸೆ ಪಡುವಂಥ ಪರಿಸ್ಥಿತಿ ಬಂದಿದೆ. ಆದುದರಿಂದ. ನಿಮ್ಮ ಮಾತುಗಳು. ಮಾನ್ಯ ಸಿಂಧ್ಯಾರವರ ಉತ್ತರ ಇವುಗಳನ್ನು ನೋಡಿದಾಗ ಈ ಕುರುಕ್ಷೇತ್ರ ಚಾಚುತ್ತಲೇ ಇದೆ ದೇಶದುದ್ದಕ್ಕೂ ಪಾತ್ರಗಳೇನೊ ಅವೆ. ಪಾತ್ರಧಾರಿಗಳು ಮಾತ್ರ ಬೇರೆ. "ಇದು ಅಡಿಗರ ಮಾತು" ದುರ್ಯೋಧನನಿಗೆ ಯುದಿಷ್ಟರನ ವೇಷ. ಶಕುನಿಗೆ ಶ್ರೀ ಕೃಷ್ಣನ ವೇಷ. ಪ್ರಧಾನ ವೇಷ ಉತ್ತರನಿಗೆ" ನನಗೆ ಬಹಳ ಆಶ್ಚರ್ಯ ಎಂದರೆ. ಮಾನ್ಯ ವಾಟಾಳ್ ನಾಗರಾಜ್‌ರವರೆ ಒಬ್ಬ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಇವತ್ತು ಮುಂದೆ

ಕುಳಿತುಕೊಂಡು ಉತ್ತರ ಕೊಡುತ್ತಾ ಇಲ್ಲ. ಕಾಂಗ್ರೆಸ್‌ನವರನ್ನು ಅಧಿಕಾರಕ್ಕೆ ಬಂದರೆ ಜೈಲಿಗೆ ಕಳುಹಿಸುತ್ತೇವೆಂದು ಹೇಳಿದಂತ ನಮ್ಮ ಮಾನ್ಯ ಎಂ.ಪಿ.ಪ್ರಕಾಶ್‌ರವರು ಸಿದ್ದರಾಮಯ್ಯನವರು ಪಿ.ಜಿ.ಆರ್. ಸಿಂಧ್ಯಾರವರು ಈಗ ಏನು ಹೇಳುತ್ತೀರಿ?

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಪ್ರಕಾಶ್‌ರವರೆ ತಾವು ಆ ರೀತಿ ಹೇಳಿದ್ದೀರಾ?

ಶ್ರೀ ಎಂ.ಪಿ.ಪ್ರಕಾಶ್ : ಕಾಂಗ್ರೆಸ್‌ನವರನ್ನು ಜೈಲಿಗೆ ಕಳುಹಿಸುತ್ತೇವೆಂದು ಹೇಳಿರಲಿಲ್ಲ, ತಪ್ಪು ಆಡಳಿತ ತಪ್ಪು ನಿರ್ಧಾರ ಮಾಡಿದವರಿಗೆ ಎನ್‌ಕ್ವಯರಿ ಆದ ಮೇಲೆ ಅವರಿಗೆ ಜೈಲು ಶಿಕ್ಷೆ ಆಗುತ್ತದೆ ಎಂದು ಹೇಳಿದ್ದೆ.

ಶ್ರೀ ವಾಟಾಳ್ ನಾಗರಾಜ್: ಯಾವ ಸರ್ಕಾರದಲ್ಲಿ?

ಶ್ರೀ ಎಂ.ಪಿ.ಪ್ರಕಾಶ್ : ಸರ್ಕಾರ ನಡೆಸಿದಂಥವರು ಯಾರಾದರೂ ಆಗಿರಬಹುದು.

ಶ್ರೀ ವಾಟಾಳ್ ನಾಗರಾಜ್ : ಇದನ್ನು ಹೇಳಿ ಎಷ್ಟು ದಿವಸವಾಯಿತು?

ಶ್ರೀ ಎಂ.ಪಿ. ಪ್ರಕಾಶ್ : ಬಹಳ ವರ್ಷವೇ ಆಯಿತು. ಈಗಲೂ ಹೇಳುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಜನ ಆಗಲೇ ಮರೆತು ಬಿಟ್ಟರು. ಯಡಿಯೂರಪ್ಪನವರೇ ಜನ ಮರೆತು ಬಿಟ್ಟಿದ್ದಾರೆ ಹೀಗಿರುವಾಗ ನೀವು ಏಕೆ ಅದನ್ನು ಹೇಳುತ್ತೀರಿ?

ಶ್ರೀ ಎಂ.ಪಿ.ಪ್ರಕಾಶ್ ; ಸರ್ಕಾರ ನಡೆಸುವಾಗ ತಪ್ಪು ಮಾಡುವಂಥದ್ದು ಇದ್ದರೆ ಆ ತಪ್ಪನ್ನು ಎನ್‌ಕ್ವಯರಿ ಮಾಡಿದಾಗ ಆ ತಪ್ಪು ಸಾಬೀತಾದರೆ ಅವರಿಗೆ ಜೈಲು ಶಿಕ್ಷೆ ಆಗುತ್ತದೆ.

ಶ್ರೀ ವಾಟಾಳ್ ನಾಗರಾಜ್ : ತಾವು ಆ ದಿವಸ ಇದೇ ಭಾಷೆಯನ್ನು ಉಪಯೋಗಿಸಿದಿರಾ?

ಶ್ರೀ ಅರಗ ಜ್ಞಾನೇಂದ್ರ : ಸಾರ್ ತಾವು ಈಗ ಒಂಬತ್ತು ತಿಂಗಳು ಆಡಳಿತ ನಡೆಸುತ್ತಿದ್ದೀರಿ. ಅವರು ಏನು ನಡೆಸಲಿಲ್ಲ. ಏನು ಅನ್ಯಾಯ ಮಾಡಲಿಲ್ಲ ಎಂಬುದು ತಮಗೆ ಕನ್‌ಫರ್ಮ್ ಆಗಿದೆಯೇ?

ಶ್ರೀ ಎಂ.ಪಿ.ಪ್ರಕಾಶ್ : ವೈಯಕ್ತಿಕ ಭಾವನೆಗಳಿಗೆ ಇಲ್ಲಿ ಅವಕಾಶ ಇಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ: ತಾವು ಏನು ಚುನಾವಣೆ ಪೂರ್ವದಲ್ಲಿ ಕಾಂಗ್ರೆಸ್‌ರವರ ಬಗ್ಗೆ ಹೇಳಿಕೆ ಕೊಟ್ಟಿದ್ದಿರಲ್ಲ. ಅದು ಹೇಳಿಕೆಯಾಗಿ ಅಲ್ಲಿ ಬಿದ್ದಿರಬೇಕೋ ಅಥವಾ ಅದನ್ನು ಸ್ವಲ್ಪವಾದರೂ ಜಾರಿಗೆ ತರುವಷ್ಟು ಪ್ರಯತ್ನ ಮಾಡುತ್ತೀರೋ?

ಶ್ರೀ ಎಂ.ಪಿ.ಪ್ರಕಾಶ್ : ಕಾಮನ್ ಮಿನಿಮಂ ಪ್ರೋಗ್ರಾಂನ ವಿಚಾರದಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ತಮ್ಮ ಈ ವರ್ಷದ ಆಯವ್ಯಯದಲ್ಲಿ ಆ ಎಲ್ಲಾ ವಿಚಾರಗಳನ್ನು ಪ್ರಸ್ತಾಪಿಸಿ ಅದಕ್ಕೆ ಹಣ ಕೊಟ್ಟಿದ್ದಾರೆ. ಇದಕ್ಕಿಂತ ಹೆಚ್ಚೇನೂ ತಾವು ನಿರೀಕ್ಷೆ ಮಾಡುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ : ಹಾಗಾದರೆ ಹಿಂದೆ ಆಗಿರುವ ಲೂಟಿಯ ಬಗ್ಗೆ ಪ್ರಶ್ನೆಯಿಲ್ಲ.

(ಗೊಂದಲ)

ಶ್ರೀ ಶರಣ ಪ್ರಕಾಶ್ ಪಾಟೀಲ್ : ತಾವು ಪಬ್ಲಿಕ್ ಅಕೌಂಟ್ ಕಮಿಟಿಯಲ್ಲಿ ಅಧ್ಯಕ್ಷರಾಗಿ ಇದ್ದೀರಿ. ಇದರ ಬಗ್ಗೆ ನೋಡಿ ನೀವು ಕಂಡುಹಿಡಿಯಿರಿ. ಹಿಂದೆ ಆಗಿದ್ದು ಸರಿಯಿಲ್ಲವೆಂದು ಮಾನ್ಯ ಹಿರಿಯ ಸದಸ್ಯರು ಹೇಳುತ್ತಿದ್ದಾರೆ. ಪಬ್ಲಿಕ್ ಅಕೌಂಟ್ ಕಮಿಟಿಯ ಅಧ್ಯಕ್ಷರು ಯಾರು ಇದ್ದಾರೆ. ಏನಾದರೂ ಆಗಿದ್ದರೆ ಕಂಡು ಹಿಡಿಯಿರಿ.

ಶ್ರೀ ವಾಟಾಳ್ ನಾಗರಾಜ್ : ಪರಪ್ಪನ ಅಗ್ರಹಾರದಲ್ಲಿ ಕಟ್ಟಡಗಳ ಬಗ್ಗೆ ಏನು ಹೇಳಿದಿರಿ.

ಶ್ರೀ ಕೆ.ಎಸ್.ಈಶ್ವರಪ್ಪ : ಅದನ್ನು ಸ್ವಲ್ಪ ಕ್ಲಾರಿಫೈ ಮಾಡಿಬಿಡಿ.

(ಗೊಂದಲ)

ಛೇರ್ಮನ್ : ಮಾನ್ಯ ಈಶ್ವರಪ್ಪನವರೇ ಈಗ ಅದರ ಬಗ್ಗೆ ಪ್ರಸ್ತಾಪ ಬೇಡ. ಮಾನ್ಯ ಯಡಿಯೂರಪ್ಪನವರೇ ತಾವು ಮುಂದುವರೆಸಿ.

ಶ್ರೀ ಅರಗ ಜ್ಞಾನೇಂದ್ರ : ಕಾಮನ್ ಮಿನಿಮಂ ಪ್ರೋಗ್ರಾಂ ಎಂದರೆ ನಿಮ್ಮ ಸಹವಾಸಕ್ಕೆ ನಾವು ಬರುವುದಿಲ್ಲ ನಮ್ಮದ್ದನ್ನು ನೀವು ಏನು ಕೇಳಬೇಡಿ ಎಂದೇ?

ಶ್ರೀ ಎಸ್ .ಎಸ್.ಪಾಟೀಲ್ : ಮಾನ್ಯ ಯಡಿಯೂರಪ್ಪನವರು ಮಾನ್ಯ ಈಶ್ವರಪ್ಪನವರು ಮಾತನಾಡುತ್ತಿದ್ದಾರೆ. ತಾವು ಕೂಡ ಚುನಾವಣೆಯ ಸಂದರ್ಭದಲ್ಲಿ ಜನತಾದಳದ ಬಗ್ಗೆ ಏನೆಲ್ಲ ಮಾತನಾಡಿದ್ದೀರಿ. ಪಾಪ ನಮ್ಮ ಮಾನ್ಯ

ಸಿದ್ದರಾಮಯ್ಯನವರನ್ನು ಹಾದಿ ತಪ್ಪಿಸುವುದಕ್ಕೆ ಹೊರಟಿದ್ದೀರಿ. ನೀವು ಮುಖ್ಯಮಂತ್ರಿಯಾಗಿ ನಾವು ನಿಮಗೆ ಸಪೋರ್ಟ ಮಾಡುತ್ತೇವೆಂದು ಅವರ ಬೆನ್ನು ಹತ್ತಿದಿರಿ. ನೀವು ಬೆನ್ನು ಹತ್ತಿದರೂ ಅವರು ಬರಲಿಲ್ಲ. ಹಾದಿ ತಪ್ಪಿಸುವುದು ಬೇರೆ ಯಾರು ಅಲ್ಲ ನೀವೇ.

ಶ್ರೀ ಕೆ.ಎಸ್.ಈಶ್ವರಪ್ಪ: ಹಾದಿ ತಪ್ಪಿಸುವುದಲ್ಲ. ಕಾಂಗ್ರೆಸ್ ಜೊತೆಗೆ ಬಂದು ನಿಮ್ಮನ್ನು ಮುಖ್ಯಮಂತ್ರಿ ಮಾಡುತ್ತೇವೆ. ಮುಖ್ಯಮಂತ್ರಿ ಮಾಡುತ್ತೇವೆಂದು ಅವರ ನಾಯಕರು ಕೂಡ ಹೇಳಿದರು. ಆದರೆ ಆಗಲಿಲ್ಲ. ಕಾಂಗ್ರೆಸ್‌ನವರು ಜಾಣರು. ಒಟ್ಟಾರೆಯಾಗಿ ಇದರಲ್ಲಿ ಸಿದ್ದರಾಮಯ್ಯನವರು ಬಲಿಪಶುವಾದರು.

ಶ್ರೀ ಎಸ್.ಎಸ್. ಪಾಟೀಲ್ : ಬಿಜೆಪಿಯವರು ಎಲ್ಲರಿಗಿಂತ ಹೆಚ್ಚಾಗಿ ಜನತಾ ದಳದವರನ್ನು ಟೀಕೆ ಮಾಡಿದಿರಿ. ಆದರೆ ದುರ್ದೈವದಿಂದ ಚುನಾವಣೆಯಾದ ಕೂಡಲೇ ಸಿದ್ದರಾಮಯ್ಯನವರೇ ನಾವು ನಿಮಗೆ ಹೊರಗಡೆಯಿಂದ ಸಪೋರ್ಟ್ ಕೊಡುತ್ತೇವೆಂದು ಹೇಳಿ? ನೀವೇ ಮುಖ್ಯಮಂತ್ರಿಯಾಗಿ ಎಂದು ಹೇಳಿದರು.

ಶ್ರೀ ಎಸ್ ರಾಜೇಂದ್ರನ್: ನನಗೆ ಇವರು ಮುಖ್ಯಮಂತ್ರಿಯಾಗಿ ಮಾಡುವುದು ಬೇಡ. ಅವರು ಮುಖ್ಯಮಂತ್ರಿಯಾಗಿ ಮಾಡುವುದು ಬೇಡ. ಟೈಂ ಬಂದರೆ ನಾನೇ ಮುಖ್ಯಮಂತ್ರಿಯಾಗುತ್ತೇನೆಂದು ಮಾನ್ಯ ಸಿದ್ದರಾಮಯ್ಯನವರು ಸುಮ್ಮನೆ ಕುಳಿತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಹಿಂದೆ ಮಾನ್ಯ ಜೆ.ಹಚ್.ಪಟೇಲ್‌ರವರು ಒಂದು ಮಾತು ಹೇಳಿದ್ದರು. ನಾನು ಅದನ್ನು ತಮ್ಮ ಗಮನಕ್ಕೆ ತರುತ್ತೇನೆ. ಯಾರೋ ಒಬ್ಬರು, ಏನು ನೀವು ಬಿಜೆಪಿಯವರು ಒಟ್ಟಾದಿರಲ್ಲ ಎಂದು ಕೇಳಿದರು. ಅವರು ಕುರುಡರು. ನಾವು ಕುರುಡರು. ರಸ್ತೆಯಲ್ಲಿ ಹೋಗುತ್ತಿರುವಾಗ ಒಬ್ಬರಿಗೊಬ್ಬರು ಕೈ ಹಿಡಿದುಕೊಂಡು ಬಿಟ್ಟೆವು. ಅದರಲ್ಲಿ ತತ್ವ ನೀತಿ ಏನೂ ಇಲ್ಲ. ಅಂದರೆ ಅವರ ಜೊತೆಯಲ್ಲಿದ್ದವರು ನೀವು. ಈಗ ಅದೇ ನೀತಿ ಎಂದು ಕಾಣುತ್ತದೆ.

ಶ್ರೀ ಎಂ.ಪಿ.ಪ್ರಕಾಶ್ : ಅದು ಆ ರೀತಿ ಅಲ್ಲ. ಸಾಧಾರಣವಾಗಿ. ಕುರುಡರು ಮತ್ತು ಹೆಳವರು ಜೊತೆಯಾದರೆ ಸರಿಹೋಗುತ್ತದೆ. ಏಕೆಂದರೆ ಹೆಳವ ನಡೆಯುವುದಕ್ಕೆ ಆಗುವುದಿಲ್ಲ. ಆದ್ದರಿಂದ ಕುರುಡನ ಹೆಗಲ ಮೇಲೆ ಹೆಳವ ಕುಳಿತುಕೊಂಡು ಅವನು ದಾರಿಯನ್ನು ತೋರಿಸುತ್ತಾನೆ. ಇವನಿಗೆ ಕಾಲು ಚೆನ್ನಾಗಿರುವುದರಿಂದ ಇವನು ಹೊತ್ತುಕೊಂಡು ಹೋಗುತ್ತಾನೆ. ಅದನ್ನು ನಾವು ಮಾಡುತ್ತಿದ್ದೇವೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಕಾಂಗ್ರೆಸ್‌ನವರು ಹೆಳವರು ಎನ್ನುವ ತೀರ್ಮಾನಕ್ಕೆ ತಾವು ಬಂದಿದ್ದೀರಿ. ತಾವು ಸತ್ಯವಾಗಿ ಹೇಳಿದಿರಿ. ಹೆಳವರನ್ನು ತಲೆ ಮೇಲೆ ಕೂರಿಸಿಕೊಂಡು ಹೋಗುತ್ತಿದ್ದೀರಿ.

ಶ್ರೀ ಎನ್.ಯೋಗೀಶ್ ಭಟ್ : ಹಾಗಾದರೆ ಕುರುಡರು ಯಾರು? ಹೆಳವರು ಯಾರು?

ಶ್ರೀ ಎಸ್.ರಾಜೇಂದ್ರನ್ : ಕುರುಡರು ಯಾರು? ಕುಂಟ ಯಾರು? ತಾವು ಹೇಳಬೇಕು ಸ್ವಾಮಿ.

ಶ್ರೀ ಜೆ.ಸಿ.ಮಾಧುಸ್ವಾಮಿ : ಒಟ್ಟಾರೆಯಾಗಿ ಹೆಳವ ಸರ್ಕಾರವನ್ನು ತಲೆ ಮೇಲೆ ಹೊತ್ತುಕೊಂಡಿದಿರಿ. ತಾವೇ ಹೇಳಿದಿರಿ.

ಛೇರ್ಮನ್ : ಮಾನ್ಯ ವಿರೋಧ ಪಕ್ಷದ ನಾಯಕರು ಚರ್ಚೆ ಮುಂದುವರಿಸುತ್ತಿದ್ದಾರೆ. ದಯಮಾಡಿ ಶಾಸಕರು ಸಹಕರಿಸಬೇಕು.

ಶ್ರೀ ಬಿ.ಎಸ್.ಯಡಿಯೂರಪ್ಪ : ಈ ವಲಯವಾರು ಯೋಜನಾ ವೆಚ್ಚದಲ್ಲಿ ಕೃಷಿ ಮತ್ತು ಸಂಬಂಧಪಟ್ಟ ಸೇವೆಗಳಿಗೆ ನೀವು ಇಟ್ಟಿರುವಂಥ ಹಣ 2004–2005 ರಲ್ಲಿ ಶೇಕಡ 6.76 ಇದ್ದರೆ ಈ ಬಾರಿ ಅದು 6.33 ಆಗಿದೆ ಎಂದರೆ ಶೇಕಡ 43ರಷ್ಟು ಕಡಿಮೆಯಾಗಿದೆ. 2004–2005ನೇ ಸಾಲಿನಲ್ಲಿ ಶಕ್ತಿ ಮೂಲಗಳಿಗೆ 22.03 ಇದ್ದರೆ 2005–06 ರಲ್ಲಿ 13.68 ರಷ್ಟು ಆಗಿದೆ ಎಂದರೆ ಶೇಕಡ 8.35 ರಷ್ಟು ಕಡಿಮೆ ಆಗಿದೆ. ಕಾರ್ಮಿಕ ಹಾಗೂ ಆರೋಗ್ಯ ವಲಯಕ್ಕೆ 2004–05ನೇ ಸಾಲಿನಲ್ಲಿ ಶೇಕಡ 0.13 ಇದ್ದರೆ 2004–05 ರಲ್ಲಿ 0.10 ಗೆ ಬಂದಿದೆ. ಅಂದರೆ ಶೇಕಡ 0.03 ರಷ್ಟು ಕಡಿಮೆಯಾಗಿದೆ. ತನ್ನ ಕಾಲ ಮೇಲೆ ನಿಂತು ದುಡಿಯುವಂಥ ಬಯಸುವ ಯುವಕ–ಯುವತಿಯರಿಗೆ ನಿಮ್ಮ ಬಜೆಟ್‌ನಲ್ಲಿ ಆರಂಭಿಕ ಮೂಲ ಧನ ಸಹಾಯ ಧನ ರಿಯಾಯತಿ ಯಾವುದೇ ಅನುಕೂಲತೆಗಳು ಮಾಡಲಿಲ್ಲ. ಅನಾಥ ವಿಧವೆಯವರಿಗೆ ಕೊಡತಕ್ಕಂಥ ಮಾಶಾಸನ ಹೆಚ್ಚಿಸುತ್ತೇವೆಂದು ಹೇಳಿದಿರಿ ಆದರೆ ಇದನ್ನು ಹೆಚ್ಚಿಗೆ ಮಾಡಲಿಲ್ಲ. ಹಾಗೆಯೇ,. ಅಂಗನವಾಡಿ ಕಾರ್ಯಕರ್ತರಿಗೆ ಹೆಚ್ಚಿನ ರೀತಿಯ ಸವಲತ್ತನ್ನು ಒದಗಿಸಿಕೊಡುತ್ತೇನೆಂದು ಹೇಳಿದಿರಿ. ಆದರೆ. ಇದನ್ನೂ ಕೂಡ ಮಾಡಲಿಲ್ಲ. ಮತ್ತೆ ಭೂರಹಿತ ದಲಿತ ಮತ್ತು ಗಿರಿಜನ ಕುಟುಂಬಗಳಿಗೆ 5 ಎಕರೆ ಭೂಮಿಯನ್ನು ಕೊಡುತ್ತೇವೆಂದು ಹೇಳಿದಿರಿ. ಆದರೆ. ಇದರಲ್ಲಿ ಅದರ ಪ್ರಸ್ತಾಪವನ್ನು ತಾವು ಮಾಡಿಲ್ಲ. ಮತ್ತೆ ಸ್ತ್ರೀಶಕ್ತಿ ಬ್ಯಾಂಕ್‌ಗಳ ಸ್ಥಾಪನೆ ಬಗ್ಗೆ ಉಲ್ಲೇಖದಲ್ಲಿ

ಯಾವುದೇ ರೀತಿಯ ಒಂದು ಹೆಚ್ಚಿನ ಅನುಕೂಲತೆಗಳನ್ನು ತಾವು ಮಾಡಿಲ್ಲ. ಅಧಿಕಾರಕ್ಕೆ ಬಂದ 24 ಗಂಟೆಯೊಳಗೆ ನಿರುದ್ಯೋಗಿ ಯುವಕರಿಗೆ 500 ರೂಪಾಯಿ ನಿರುದ್ಯೋಗಿ ಭತ್ಯೆಯನ್ನು ಕೊಡುತ್ತೇವೆಂದು ನಮ್ಮ ಕಾಂಗ್ರೆಸ್‌ನ ಸ್ನೇಹಿತರು ಭರವಸೆ ಕೊಟ್ಟಿದ್ದರು. ಆದರೆ. ಇದರ ಬಗ್ಗೆ ಒಂದು ಶಬ್ದ ಕೂಡ ಇದರಲ್ಲಿ ನಾವು ಎಲ್ಲಿಯೂ ಕಾಣುತ್ತಿಲ್ಲ. 2004–2005ನೇ ಸಾಲಿನಲ್ಲಿ ಅನುದಾನದ ಕೊರತೆಯಿಂದಾಗಿ ಈ ರಾಜ್ಯದ ಮೀನುಗಾರರಿಗೆ ವಸತಿ ಸೌಕರ್ಯ ಕಲ್ಪಿಸಿಕೊಡುವಂಥ ಕಾರ್ಯಕ್ರಮವನ್ನು ನಾವು ಅನುಷ್ಠಾನಗೊಳಿಸುವುದಕ್ಕೆ ಆಗಲಿಲ್ಲ ಎಂದು ತಾವು ಉತ್ತರ ಕೊಡುವಂಥ ಸಂದರ್ಭದಲ್ಲಿ ಈ ಮಾತನ್ನು ಇದೇ ಸದನದಲ್ಲಿ ತಾವು ಹೇಳಿದ್ದೀರಿ. ನನ್ನ ಪ್ರಕಾರ ಇವತ್ತಿನ ದಿವಸ ನೀರಾವರಿ ಇಲಾಖೆ. ಪಿ.ಡಬ್ಲ್ಯೂ.ಡಿ. ತಾಲ್ಲೂಕು ಪಂಚಾಯಿತಿ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಮಲೆನಾಡು ಅಭಿವೃದ್ಧಿ ಮಂಡಳಿ ಸೇರಿ ಸುಮಾರು 700 ರಿಂದ 750 ಕೋಟಿ ರೂಪಾಯಿಗಳಷ್ಟು ಪೆಂಡಿಂಗ್ ಬಿಲ್ಸ್ ಬಾಕಿ ಇವೆ. ಇದಕ್ಕೆ ಸಂಬಂಧಪಟ್ಟಂತೆ ಪ್ರತಿಯೊಂದು ಇಲಾಖೆಯ ವಿವರವನ್ನು ನಾನು ಕೊಡುತ್ತೇನೆ. ಸಣ್ಣ ಕೈಗಾರಿಕೆಗಳ ಬಗ್ಗೆ ಸರ್ಕಾರದವರೇ ಉತ್ತರ ಕೊಟ್ಟಿದ್ದಾರೆ. ಐದಾರು ವರ್ಷಗಳಿಂದ ಜೀವನ ಮಾಡುವುದಕ್ಕೆ ಆಗದೆ ತುಂಬ ಕಷ್ಟದಲ್ಲಿ ಮತ್ತು ಉಸಿರು ಕಟ್ಟುವಂಥ ಪರಿಸ್ಥಿತಿಯಲ್ಲಿ ಅವರು ಇದ್ದಾರೆ. ದಿನಾಂಕ 10–12–2004ರವರೆಗೆ 20.226 ಘಟಕಗಳಿಗೆ 356.05 ಕೋಟಿ ರೂಪಾಯಿಗಳಷ್ಟು ಸಬ್ಸಿಡಿ ಹಣ ಕೊಡಬೇಕಾಗಿದೆ. ಈ ಹಣವನ್ನು ತಾವು ಇದುವರೆಗೂ ಪಾವತಿ ಮಾಡಿಲ್ಲ. ಈ ರೀತಿಯಾದ ಒಂದು ಪರಿಸ್ಥಿತಿ ಇವತ್ತಿನ ದಿವಸ ಇದೆ. ಈ ರಾಜ್ಯದ ಜನತೆ ದೃಷ್ಟಿಯಿಂದ ವ್ಯಾಟ್ ಸಿಸ್ಟಮ್‌ನ್ನು ತಾವು ಇಂಟ್ರಡ್ಯೂಸ್ ಮಾಡುತ್ತಿದ್ದೀರಿ. ಕೇಂದ್ರ ಸರ್ಕಾರದ ಆದೇಶದ ಪ್ರಕಾರ ಈ ವ್ಯಾಟ್ ಸಿಸ್ಟಮ್‌ನ್ನು ತಾವು ಜಾರಿಗೆ ತರುವುದಕ್ಕೆ ಹೊರಟ್ಟಿದ್ದೀರಿ. ಇದನ್ನು ನಾನೂ ಕೂಡ ಸ್ವಾಗತ ಮಾಡುತ್ತೇನೆ. ಆದರೆ, ಕೇಂದ್ರ ಸರ್ಕಾರ ಮಾಡಿರತಕ್ಕಂಥ ಈ ವ್ಯಾಟ್ ವ್ಯವಸ್ಥೆಯಿಂದ ರಾಜ್ಯ ಸರ್ಕಾರದ ಬೊಕ್ಕಸಕ್ಕೆ ಮೊದಲನೇ ವರ್ಷ ಆಗತಕ್ಕಂಥ ಲಾಸನ್ನು 100 ಪರ್ಸೆಂಟ್ ತುಂಬಿಕೊಡುತ್ತೇವೆಂದು ಹೇಳಿದ್ದಾರೆ. ಹಾಗೆಯೇ ಎರಡನೇ ವರ್ಷ ಆಗತಕ್ಕಂಥ ಲಾಸ್‌ನಲ್ಲಿ 75 ಪರ್ಸೆಂಟ್‌ನಷ್ಟು ತುಂಬಿಕೊಡುತ್ತೇವೆಂದು ಹೇಳಿದ್ದಾರೆ. ಮತ್ತೆ ಮೂರನೇ ವರ್ಷ 50 ಪರ್ಸೆಂಟ್ ಲಾಸ್ ತುಂಬಿಕೊಡುತ್ತೇವೆಂದು ಹೇಳಿದ್ದಾರೆ. ನಾನು ಈ ಸಂದರ್ಭದಲ್ಲಿ ತಮಗೆ ಒತ್ತಾಯ ಮಾಡುವುದೇನೆಂದರೆ. ಹೊಸದಾಗಿ ಜಾರಿಗೆ ತರುತ್ತಿರುವ ಈ ವ್ಯಾಟ್ ಸಿಸ್ಟಮ್‌ನ್ನು ಎರಡು ವರ್ಷಗಳವರೆಗೆ ಇದೊಂದು ಎಜ್ಯುಕೇಷನ್ ಪೀರಿಯಡ್ ಎಂದು ತಾವು ತಿಳಿದುಕೊಳ್ಳಬೇಕಾಗುತ್ತದೆ. ಮತ್ತೆ ಇದನ್ನು

ಜನತೆಗೆ ಮತ್ತು ವ್ಯಾಪಾರಸ್ಥರಿಗೆ ಹಾಗೂ ಗ್ರಾಹಕರಿಗೆ ಹೇಳಬೇಕಾಗುತ್ತದೆ. ಪ್ರತಿಯೊಂದು ಜಿಲ್ಲೆಯಲ್ಲಿಯೂ ಕೂಡ ವ್ಯಾಟ್‌ಗೆ ಸಂಬಂಧಪಟ್ಟಂತೆ ಒಂದು ಸಲಹಾ ಕೇಂದ್ರವನ್ನು ತೆಗೆದು ವ್ಯಾಟಿಗೆ ಸಂಬಂಧಪಟ್ಟಂತೆ ಏನೇ ಸಮಸ್ಯೆ ಬಂದರೂ ಕೂಡ ಅಲ್ಲಿ ಹೋಗಿ ಬಗೆಹರಿಸಿಕೊಳ್ಳುವಂಥ ಒಂದು ವ್ಯವಸ್ಥಿತವಾದಂಥ ಕೆಲಸವನ್ನು ತಾವು ಮಾಡದಿದ್ದರೆ ಜನರು ಗಾಬರಿಯಾಗುತ್ತಾರೆ. ಮತ್ತೆ ವ್ಯಾಪಾರಸ್ಥರಿಗೂ ಕೂಡ ಇದರ ಬಗ್ಗೆ ಧೈರ್ಯ ತುಂಬಬೇಕಾಗಿದೆ. ಸರ್ಕಾರ ವ್ಯಾಟ್ ವ್ಯವಸ್ಥೆ ತಂದು ನಮ್ಮನ್ನು ಮಟ್ಟ ಹಾಕುವುದಕ್ಕೆ ಬಂದಿಲ್ಲ. ಇದರಿಂದ ನಮಗೆ ಅನುಕೂಲವಾಗುತ್ತದೆಂದು ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಗೆ ವಿಶ್ವಾಸ ಬರತಕ್ಕಂಥ ಒಂದು ಕಾರ್ಯಕ್ರಮವನ್ನು ತಾವು ಮಾಡಬೇಕಾಗುತ್ತದೆ. 6 ತಿಂಗಳೊಳಗಾಗಿ ಮಾಡದಿದ್ದರೆ ಇದಕ್ಕೆ ದಂಡ ಹಾಕುತ್ತೇವೆ ಎಂಬ ಪೆನಾಲ್ಟಿ ಎಂಬ ಭೂತವನ್ನು ತಾವು ಸೃಷ್ಟಿ ಅಥವಾ ಈ ರೀತಿಯಾದ ಒಂದು ವಾತಾವರಣವನ್ನು ತಾವು ಸೃಷ್ಟಿ ಮಾಡಬೇಕು. ಏಕೆಂದರೆ ಮುಂದೆ ಬರುವಂಥ ದಿವಸಗಳಲ್ಲಿ ಪ್ರತಿಯೊಂದಕ್ಕೂ ಬಿಲ್ ಹಾಕಬೇಕಾಗುತ್ತದೆ. ನಮಗೆ ಬಿಲ್ ಕೊಡುವುದಾಗಲಿ ಅಥವಾ ಕೇಳುವುದಾಗಲಿ ಗೊತ್ತಿಲ್ಲ. ವ್ಯಾಪಾರಸ್ಥರು ಬಿಲ್ ಕೊಟ್ಟರೆ ಮಾತ್ರ ತೆಗೆದುಕೊಳ್ಳುತ್ತೇವೆ. ಈ ಒಂದು ಹೊಸ ವ್ಯವಸ್ಥೆಯಿಂದ ನಾವು ಎಲ್ಲೋ ಒಂದು ಕಡೆ ಸುಳಿಯಲ್ಲಿ ಸಿಕ್ಕಿಕೊಳ್ಳುತ್ತೇವೆಂಬ ಗಾಬರಿ ಇವತ್ತಿನ ದಿವಸ ವ್ಯಾಪಾರಸ್ಥರಲ್ಲಿ ಮತ್ತು ಗ್ರಾಹಕರಲ್ಲಿ ಬಂದಿದೆ. ಇದಕ್ಕೆ ತಾವು ಅವಕಾಶ ಕೊಡಬಾರದು. ಏಕೆಂದರೆ ನಮ್ಮ ಅಧಿಕಾರಿಗಳು ಕುಂಟುನೆಪ ಹೇಳಿ ಬೆದರಿಸಿ ಕಿರುಕುಳ ಕೊಡತಕ್ಕಂಥದ್ದು ಇವತ್ತಿನ ದಿವಸ ಪರಿಪಾಠವಾಗಿದೆ. ಆದ್ದರಿಂದ. ಈ ವ್ಯಾಟ್ ವ್ಯವಸ್ಥೆ ಸರಿಯಾದಂಥ ರೀತಿಯಲ್ಲಿ ಜಾರಿಗೆ ಬರುವುದಕ್ಕೆ ಬೇಕಾಗಿರತಕ್ಕಂಥ ಎಲ್ಲಾ ರೀತಿಯ ಸಿದ್ದತೆಗಳನ್ನು ತಾವು ಮಾಡಿಕೊಂಡು ವ್ಯಾಪಾರಸ್ಥರಿಗೆ ಮತ್ತು ಗ್ರಾಹಕರಿಗೆ ಧೈರ್ಯ ತುಂಬತಕ್ಕಂಥ ಕೆಲಸವನ್ನು ತಾವು ಮಾಡಬೇಕಾಗುತ್ತದೆ. ಈ ಒಂದು ವ್ಯವಸ್ಥೆ ಹೊಸದೇನು ಅಲ್ಲ. ಈಗಾಗಲೇ 130 ದೇಶಗಳಲ್ಲಿ ವ್ಯಾಟ್ ವ್ಯವಸ್ಥೆ ಇದೆ. ಹಾಗೆಯೇ ಅನೇಕ ಡೆವಲಪ್‌ಮೆಂಟ್ ಕಂಟ್ರೀಸ್‌ನಲ್ಲಿಯೂ ಕೂಡ ಈ ವ್ಯವಸ್ಥೆ ಇದೆ. ಬಹುಶಃ ಇನ್ನು ಮುಂದೆ ಸೇಲ್ಸ್ ಟ್ಯಾಕ್ಸ್ ಮತ್ತು ಕಮರ್ಷಿಯಲ್ ಟ್ಯಾಕ್ಸ್ ಇಲಾಖೆಯ ಅಧಿಕಾರಿಗಳಿಗೆ ಯಾವುದೇ ರೀತಿಯ ಕೆಲಸ ಇರುವುದಿಲ್ಲ. ಎಂದು ನಾನು ತಿಳಿದುಕೊಂಡಿದ್ದೇನೆ. ಆದ್ದರಿಂದ, ಇದನ್ನು ಸರಿಯಾದ ರೀತಿಯಲ್ಲಿ ಜಾರಿಗೆ ತರತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಹತ್ತಾರು ವರ್ಷಗಳಿಂದ ಎಂಪ್ಲಾಯ್‌ಮೆಂಟ್ ಜನರೇಷನ್ ಬಗ್ಗೆ ನಾವು ಗಮನಿಸುತ್ತಿದ್ದೇವೆ. ಆದರೆ, ಈ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಬಗ್ಗೆ ನಾವು ವಿಶೇಷವಾದಂಥ ಯಾವುದೇ ರೀತಿಯ ಗಮನವನ್ನು ಕೊಡುತ್ತಿಲ್ಲ.

ಎಕನಾಮಿಕ್ ಪಾಲಿಸಿ ತಂದಿರುವಂಥ ಸಮಯದಲ್ಲಿ ನಾವು ಜಾಬ್ ಕ್ರಿಯೇಷನ್‌ಗೆ ಹೆಚ್ಚಿನ ಒತ್ತು ಕೊಡಬೇಕಾಗುತ್ತದೆ. ಮೊನ್ನೆ ದಿವಸ ಮಾನ್ಯ ರಾಷ್ಟ್ರಪತಿಯವರು ಭಾಷಣ ಮಾಡತಕ್ಕಂಥ ಸಂದರ್ಭದಲ್ಲಿ ಸುಮಾರು 7.5 ಲಕ್ಷ ಕೋಟಿ ನಿರುದ್ಯೋಗಿಗಳಿಗೆ ಇನ್ನು 5 ವರ್ಷಗಳಲ್ಲಿ ಉದ್ಯೋಗವನ್ನು ಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದಾರೆ. ಅದಕ್ಕೆ ಪುರಾ ಎಂದು ಕರೆಯುತ್ತಾರೆ. ಅಂದರೆ providing urban facilities in rural areas ಸ್ಕೀಂ ಅಡಿಯಲ್ಲಿ ಇದನ್ನು ಮಾಡುತ್ತೇನೆ ಎಂಬ ಮಾತನ್ನು ಹೇಳಿದ್ದಾರೆ.

ಶ್ರೀ ಸಿದ್ದರಾಮಯ್ಯ :- ವಿಧಾನ ಪರಿಷತ್‌ನಲ್ಲಿ ಪ್ರಶ್ನೋತ್ತರ ವೇಳೆ ನಡೆಯುತ್ತಿದೆ. ಆದ್ದರಿಂದ ನಾನು ಅಲ್ಲಿಗೆ ಹೋಗಬೇಕಾಗಿದೆ. ಮಾನ್ಯ ಯಡಿಯೂರಪ್ಪನವರು ತಮ್ಮ ಭಾಷಣವನ್ನು ಮುಂದುವರಿಸಬಹುದು.

ಶ್ರೀ ಬಿ.ಎಸ್.ಯಡಿಯೂರಪ್ಪ:- ನೀವು ಹೋದರು ಇಲ್ಲಿ ಮಾನ್ಯ ಮುಖ್ಯಮಂತ್ರಿಗಳಾದರು ಇರಬೇಕಲ್ಲವೇ? ಇದೇ ಪದ್ಧತಿಯನ್ನು ಮುಂದುವರಿಸುವುದಾದರೆ ನಮ್ಮದೇನು ಅಭ್ಯಂತರವಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ :- ಮಾನ್ಯ ಛೇರ್ಮನ್‌ರವರೆ, ಮಾನ್ಯ ಉಪಮುಖ್ಯಮಂತ್ರಿಯವರ ಹಿಂದೆ ವಿಧಾನಸಭೆಯ ಕಾರ್ಯದರ್ಶಿಗಳು ಬಂದು ನಿಂತುಕೊಂಡು ಮಾತನಾಡುವುದು ಸರಿಯಲ್ಲ. ಸೆಷನ್ ನಡೆಯುತ್ತಿರುವಾಗ ಕಾರ್ಯದರ್ಶಿಯವರು ಅಲ್ಲಿ ಬಂದು ನಿಂತುಕೊಂಡರೆ ಈ ಸಭೆಗೆ ಗೌರವ ಬರುತ್ತದೆಯೆ? ತಾವು ಕೂಡ ಸೀನಿಯರ್ ಆಗಿದ್ದೀರಿ.

ಛೇರ್ಮನ್ :- ಮಾನ್ಯ ಯಡಿಯೂರಪ್ಪನವರೆ, ತಮ್ಮ ಮಾತನ್ನು ಮುಂದುವರಿಸಿ.

ಶ್ರೀ ಬಿ.ಎಸ್.ಯಡಿಯೂರಪ್ಪ:- ಈ ಸಂದರ್ಭದಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ನಾವು ಸಾಕಷ್ಟು ಚರ್ಚೆ ಮಾಡಿದ್ದೇವೆ. ಮತ್ತೆ ಇದೇ ರೀತಿಯಾಗಿ ಆಡಳಿತ ನಡೆಸಬೇಕೆಂದು ಮತ್ತು ಅಧಿಕಾರಿಗಳು ಇದೇ ರೀತಿಯಾಗಿ ನಡೆದುಕೊಳ್ಳಬೇಕೆಂದು ತಾವು ಬಿಟ್ಟರೆ ನಮ್ಮದೇನು ಅಭ್ಯಂತರವಿಲ್ಲ. ಆದರೆ. ನಾನು ನಿಮ್ಮನ್ನು ಕೇಳುವುದೆಂದರೆ. ಸಮ್ಮಿಶ್ರ ಸರ್ಕಾರ ಎಂದು ತಾವು ಹೇಳುತ್ತೀರಿ. ಜವಾಬ್ದಾರಿ ಎನ್ನುವುದು ಇದ್ದರೆ ನಿಮ್ಮ ಕಡೆ ಇಷ್ಟೊಂದು ಸೀಟ್‌ಗಳು ಖಾಲಿ ಇರುತ್ತಿತ್ತೆ? ನಮ್ಮ ಕಡೆ ಎಷ್ಟು ಜನ ಇದ್ದಾರೆಂಬುದನ್ನು ತಾವೇ ನೋಡಿ. ಅಂದರೆ, ನೀವು ಯಾವುದೊಂದು ಗೊಂದಲಕ್ಕೆ

ಸಿಕ್ಕಿಕೊಂಡಿದ್ದೀರೆಂದು ಕಾಣುತ್ತದೆ. ನಾವು ಇಲ್ಲಿ ಮಾಡತಕ್ಕಂಥ ಚರ್ಚೆ ಒಣ ಚರ್ಚೆಯಾಗಬಹುದೆಂದು ನನ್ನ ಭಾವನೆಯಾಗಿದೆ. ನಾನು ಇನ್ನು ವಿಷಯಕ್ಕೆ ಬಂದಿಲ್ಲ. ನನಗೆ ಆಗುತ್ತಿರುವ ಆಶ್ಚರ್ಯ ಏನೆಂದರೆ, ಆಡಳಿತ ಪಕ್ಷದ ಮಂತ್ರಿಗಳು ಮತ್ತು ಆಡಳಿತ ಪಕ್ಷ ಯಾವುದೊಂದು ಗೊಂದಲಕ್ಕೆ ಸಿಲುಕಿಕೊಂಡು ನರಳುತ್ತಿದ್ದಾರೆ. ನಿನ್ನೆ ರಾತ್ರಿ ನಡೆದ ವ್ಯವಹಾರ ಪೂರ್ಣವಾಗಿ ಆಗದೇ ಇದ್ದರೆ ಎರಡು ದಿವಸ ಅಧಿವೇಶನವನ್ನು ಮುಂದೂಡಿ. ಇದಕ್ಕೆ ನಾವೇನು ಬೇಡವೆಂದು ಹೇಳುವುದಿಲ್ಲ. ಪುರುಸೊತ್ತು ಮಾಡಿಕೊಂಡು ನೀವು ಇಲ್ಲಿಗೆ ಬರಬಹುದಾಗಿತ್ತು. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ ಪ್ರಕಾರ ಈ ರೀತಿಯಾದ ವಾತಾವರಣ ಶೋಭೆ ತರತಕ್ಕಂಥದಲ್ಲ. ಇವತ್ತಿನ ದಿವಸ ಪ್ರಜಾತಂತ್ರ ವ್ಯವಸ್ಥೆಗೆ ಒಂದು ರೀತಿ ಅಣುಕು ಮಾಡತಕ್ಕಂಥ ರೀತಿಯಲ್ಲಿ ಈ ಸಮ್ಮಿಶ್ರ ಸರ್ಕಾರ ವರ್ತನೆ ಮಾಡುತ್ತಿದೆ. ಎಂದು ಹೇಳುತ್ತಾ ನನ್ನ ಮಾತನ್ನು ಮುಂದುವರಿಸುತ್ತೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಬೇರೇನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸುವ ಕಡೆ ನಾವು ವಿಶೇಷವಾದಂಥ ಗಮನವನ್ನು ಕೊಡಬೇಕಾಗುತ್ತದೆ. ಇಡೀ ರಾಜ್ಯದಲ್ಲಿ ಈ ಸಮಸ್ಯೆ ನಮ್ಮನ್ನು ಕಾಡುತ್ತಿದೆ. ಒಂದು ಕಡೆ ಬರಗಾಲವಿರುವುದರಿಂದ ಕೃಷಿ ಕಾರ್ಮಿಕರಿಗೆ ಕೆಲಸವಿಲ್ಲ. ಮತ್ತೊಂದು ಕಡೆ ವಿದ್ಯಾವಂತ ನಿರುದ್ಯೋಗ ಯುವಕರಿಗೆ ಉದ್ಯೋಗವಿಲ್ಲದೆ ತಂದೆ-ತಾಯಿಗಳಿಗೆ ಮತ್ತು ಸಮಾಜಕ್ಕೆ ಭಾರವಾಗಿ ರಸ್ತೆಯಲ್ಲಿ ತಿರುಗುತ್ತಿರುವ ಪರಿಸ್ಥಿತಿಯನ್ನು ನಾವು ನೋಡುತ್ತಿದ್ದೇವೆ. ಒಬ್ಬ ನಿರುದ್ಯೋಗಿ ಒಂದು ಸಣ್ಣ ಕೈಗಾರಿಕೆ ಪ್ರಾರಂಭ ಮಾಡಿ ಹತ್ತಾರು ಜನರಿಗೆ ಉದ್ಯೋಗ ಕೊಡುತ್ತಿದ್ದ ಸಣ್ಣ ಕೈಗಾರಿಕೆ ಇವತ್ತಿನ ದಿವಸ ಸಬ್ಸಿಡಿ ಕೊಡತಕ್ಕಂಥದನ್ನು ತಾವು ನಿಲ್ಲಿಸಿದ್ದೀರಿ. ಅಂದರೆ ಎಲ್ಲಾ ಯೋಜನೆಗಳಿಗೆ ಸಬ್ಸಿಡಿ ಕೊಡತಕ್ಕಂಥದನ್ನು ನಿಲ್ಲಿಸಿದ್ದೀರಿ. ಈ ರೀತಿಯಾದರೆ ಕೈಗಾರಿಕೆಯನ್ನು ಸ್ಥಾಪನೆ ಮಾಡುವುದಕ್ಕೆ ಯಾರು ಮುಂದೆ ಬರುತ್ತಾರೆ? ನಮ್ಮದು ಸರ್ಪ್ಲಸ್ ಬಜೆಟ್ ನಮ್ಮ ಸರ್ಕಾರದ ಬೊಕ್ಕಸ ತುಂಬಿ ತುಳುಕುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ಒಬ್ಬ ನಿರುದ್ಯೋಗಿ ನನಗೆ ಸಬ್ಸಿಡಿ ಸಿಗುತ್ತದೆಂದು ಸಣ್ಣ ಕೈಗಾರಿಕೆಯನ್ನು ಪ್ರಾರಂಭ ಮಾಡಿರುತ್ತಾನೆ. ಆದರೆ, ತಾವು ಈಗ ಸಬ್ಸಿಡಿ ನಿಲ್ಲಿಸುವುದರಿಂದ ಆತ ಮಾಡಿರತಕ್ಕಂಥ ಸಾಲಕ್ಕೆ ಸುಸ್ತಿಬಡ್ಡಿ ಆಗಿರುವುದರಿಂದ ಆತ ನೇಣು ಅಥವಾ ವಿಷ ತೆಗೆದುಕೊಳ್ಳತಕ್ಕಂಥ ಸ್ಥಿತಿ ಇವತ್ತಿನ ದಿವಸ ಬಂದಿದೆ. ನಿಮ್ಮ ಹತ್ತಿರ ಸರ್ಪ್ಲಸ್ ಹಣವಿದ್ದರೆ ಸಬ್ಸಿಡಿ ಹಣವನ್ನು ಪೂರ್ಣವಾಗಿ ಕೊಡುವುದಕ್ಕೆ ತಾವು ಮೀನಾಮೇಷ ಏಕೆ ಮಾಡುತ್ತಿದ್ದೀರಿ? ಇದನ್ನು ಕೊಡುವುದಕ್ಕೆ ನಿಮಗೇನು ತೊಂದರೆ ಇದೆ? ಈ ರಾಜ್ಯದಲ್ಲಿ ನಿರುದ್ಯೋಗಿ ಯುವಕ ನೆಮ್ಮದಿಯಿಂದ ಬದುಕುವಂಥ ಪರಿಸ್ಥಿತಿ ತರುವುದು ಬೇಡವೇ? ಈ

ಸಂದರ್ಭದಲ್ಲಿ ನಾನು ನಿಮ್ಮಲ್ಲಿ ಒತ್ತಾಯ ಮಾಡುವುದೇನೆಂದರೆ, ನಿಜಕ್ಕೂ ನಿಮಗೆ ಕಳಕಳಿ ಇದ್ದರೆ ಫುಡ್ ಪ್ರೋಸೆಸಿಂಗ್ ಯುನಿಟ್‌ಗಳಿಗೆ ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗಳಿಗೆ ಹಾಗೂ ಇತರೇ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳಿಗೆ ಹೆಚ್ಚು ಒತ್ತು ಮತ್ತು ಹೆಚ್ಚಿನ ಹಣಕಾಸಿನ ನೆರವು ಹಾಗೂ ಹೆಚ್ಚು ಸಬ್ಸಿಡಿ ಕೊಟ್ಟು ಹೆಚ್ಚಿನ ಉದ್ಯೋಗ ಕೊಡುವ ಕಡೆ ವಿಶೇಷವಾದಂಥ ಗಮನವನ್ನು ತಾವು ದಯಮಾಡಿ ಕೊಡಬೇಕಾಗುತ್ತದೆ. ಇವತ್ತಿನ ದಿವಸ ಆನ್ ಆರ್ಗನೈಜೇಷನ್ ಸೆಕ್ಟರ್‌ಗಳಿಂದ 92 ಭಾಗದಷ್ಟು ಉದ್ಯೋಗಾವಕಾಶ ಸಿಗುತ್ತಿರುವುದು ತಮಗೂ ಕೂಡ ಗೊತ್ತಿದೆ. ಇದು ಅಗ್ರಿಕಲ್ಚರ್ ಅಥವಾ ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್ ಅಥವಾ ಫಿಷರೀಸ್ ಅಥವಾ ಬೇರೆ ಬೇರೆ ಸ್ಮಾಲ್ ಸೆಕ್ಟರ್ಸ್ ಇರಬಹುದು. ಈ ಎಲ್ಲಾ ವಲಯಗಳಿಂದ ಶೇಕಡ 92 ರಷ್ಟು ಉದ್ಯೋಗವನ್ನು ಕಲ್ಪಿಸಿಕೊಡುತ್ತೇವೆ. ಆದರೆ. ಕಳೆದ ಹತ್ತಾರು ವರ್ಷಗಳಿಂದ ಈ ಸೆಕ್ಟರನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಇದುವರೆಗೆ ಅಧಿಕಾರಕ್ಕೆ ಬಂದಿರತಕ್ಕಂಥ ಸರ್ಕಾರಗಳು ಸಣ್ಣ ಕೈಗಾರಿಕೆಗಳು ಮತ್ತು ಕಾಟೇಜ್ ಇಂಡಸ್ಟ್ರೀಸ್‌ಗಳನ್ನು ಬಲಪಡಿಸಿ ನಿರುದ್ಯೋಗ ಸಮಸ್ಯೆಯನ್ನು ಬಗೆಹರಿಸಬೇಕೆಂಬುದರ ಕಡೆಗೆ ಎಂದೂ ಕೂಡ ಕಾಳಜಿ ತೋರಿಸಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ : (ಮುಂದು) ಬಿಗ್ ಇಂಡಸ್ಟ್ರೀಸ್‌ನವರು 8 ಪರ್ಸೆಂಟ್ ಉದ್ಯೋಗವನ್ನು ಕೊಡುವುದಕ್ಕಾಗುವುದಿಲ್ಲ. ಪಬ್ಲಿಕ್ ಸೆಕ್ಟಾರ್‌ನಲ್ಲಿ ಜಾಬ್ ಸಿಗುವುದು 5 ಪರ್ಸೆಂಟ್ ಆದರೆ ಪ್ರೈವೇಟ್ ಆರ್ಗನೇಜೇಷನ್‌ನಲ್ಲಿ ಸೆಕ್ಟಾರ್‌ನಲ್ಲಿ 3 ಪರ್ಸೆಂಟ್ ಸಿಗುತ್ತದೆ. ಈ ಹೊಸ ಎಕನಾಮಿಕ್ ಪಾಲಿಸಿಯನ್ನು ನಾವು ಪಡೆದುಕೊಳ್ಳುತ್ತಿದ್ದೇನೆ. ಅದು ಅರ್ಬನ್ ಸೆಕ್ಟಾರ್‌ಗೆ ಮಾತ್ರ ಸೀಮಿತವಾಗಿದೆ. ಅದೇನು ಜಾಬ್ ಕ್ರಿಯೇಷನ್ ಆಗುವುದಿಲ್ಲ. ಲಾಭ ಮಾತ್ರ ಎಷ್ಟು ಜನಕ್ಕೆ ಜಾಸ್ತಿ ಸಿಗಬಹುದು ಆದ್ದರಿಂದ ನಾನು ಹಣಕಾಸಿನ ಸಚಿವರಲ್ಲಿ ಒತ್ತಾಯ ಮಾಡುವುದೇನೆಂದರೆ. ಈ ಸ್ಮಾಲ್ ಸ್ಕೇಲ್ ಇಂಡಸ್ಟ್ರೀ ಮತ್ತು ಕಾಟೇಜ್ ಇಂಡಸ್ಟ್ರೀ ವಿಶೇಷವಾಗಿ ಫುಡ್ ಪ್ರೋಸೆಸಿಂಗ್ ಯೂನಿಟ್‌ಗಳನ್ನು ಬಲಪಡಿಸುವುದಕ್ಕೆ ಬೇಕಾದಂತಹ ಹಣಕಾಸಿನ ವ್ಯವಸ್ಥೆಯನ್ನು ತಾವು ವಿಶೇಷವಾದ ಗಮನವನ್ನು ಕೊಡಬೇಕಾಗುತ್ತದೆ. ತನ್ನ ಬಜೆಟ್‌ನಲ್ಲಿ ಒಂದು ಮಾತು ಬಂದಿದೆ. ಈ 12ನೇ ಹಣಕಾಸಿನ ಆಯೋಗದಿಂದ ನಮಗೇನು ಹೆಚ್ಚು ಅನುಕೂಲವಾಗಲಿಲ್ಲವೆಂದು ನೇರವಾಗಿ ತಾವು ಬಜೆಟ್ ಸ್ಪೀಚ್‌ನಲ್ಲಿ ಹೇಳಿದ್ದೀರಿ. 12ನೇ ಹಣಕಾಸಿನಿಂದ ಸುಮಾರು 13 ಪರ್ಸೆಂಟ್ ಟ್ಯಾಕ್ಸ್ ರೆವಿನ್ಯೂ ಎಲ್ಲಾ ಸ್ಟೇಟ್‌ನಿಂದ ಸುಮಾರು 29 ರಿಂದ 30 ಸಾವಿರ ಕೋಟಿ ರೂಪಾಯಿಗಳು ಬರಬೇಕು. ಈಗ ಕೇಂದ್ರ ಸರ್ಕಾರ ಏನು ಮಾಡುತ್ತಿದೆ? ಇದನ್ನು ನೇರವಾಗಿ ಕೊಟ್ಟರೆ ಅವರ ಟ್ರಷರಿ

ಖಾಲಿಯಾಗುತ್ತದೆಂದು ಹೇಳಿ ಹಣಕಾಸಿನ ಸಚಿವರಾದಂತಹ ಶ್ರೀ ಚಿದಂಬರಂರವರು ಏನು ಉಪಾಯವನ್ನು ಹುಡುಕಿದರು ಎಂದರೆ ಈ ಪ್ಲಾನ್ ಅಸಿಸ್ಟೆಂಟ್ ಎಂದು ಲೋನನ್ನು ಯಾವುದೇ ರಾಜ್ಯದಲ್ಲಿ ಕೊಡುವುದಿಲ್ಲ. ಅದನ್ನು ಕೈಬಿಟ್ಟು ಇನ್ನು ಮುಂದೆ ಕೇಂದ್ರ ಸರ್ಕಾರ ಆಯಾಯ ರಾಜ್ಯಸರ್ಕಾರಗಳೆ ಬೇಕಾದರೆ ಲೋನ್ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಇನ್ನು ಮುಂದೆ ಕೇಂದ್ರ ಸರ್ಕಾರ ಯಾವುದೇ ನೆರವಿಗೆ ಬರುವುದಕ್ಕೆ ಸಾಧ್ಯವಿಲ್ಲ. ರಾಜ್ಯ ಸರ್ಕಾರಗಳೇ ನೀವೇ ನೇರವಾಗಿ ಲೋನ್ ತೆಗೆದುಕೊಳ್ಳಿ ಎಂದು ಹೇಳಿದ್ದಾರೆ. ಮೊದಲು ಕೇಂದ್ರಸರ್ಕಾರ ನೆರವಿಗೆ ಬಂದರೆ ಸುಲಭವಾಗಿ ಲೋನ್ ಸಿಗುತ್ತಿತ್ತು. ನೀವೇ ಲೋನ್ ತೆಗೆದುಕೊಳ್ಳಬೇಕಾದಾಗ ನಿಮ್ಮ ಹಣಕಾಸಿನ ಪರಿಸ್ಥಿತಿಯು ಸುಧಾರಣೆಯಾಗಬೇಕು. ನಿಮ್ಮ ಶಕ್ತಿಯ ಮೇಲೆ ನೀವು ಇಂಡಿವಿಜ್ಯುಯಲ್ ಆಗಿ ಬ್ಯಾಂಕಿಗೆ ಹೋಗಿ ಕೇಳಿದರೆ ಸಾಲವನ್ನು ಕೊಡುತ್ತಾರೆಯೋ ಅದೇ ರೀತಿಯಾಗಿ ರಾಜ್ಯದ ಆರ್ಥಿಕ ಪರಿಸ್ಥಿತಿಯಿರಬೇಕು. ಅಂದರೆ ಇನ್ನು ಮುಂದೆ ಆರ್ಥಿಕವಾಗಿ ನಾವು ಸಬಲರು ಆಗದಿದ್ದರೆ ಮಾರ್ಕೆಟ್‌ನಲ್ಲಿ ಸಾಲವನ್ನು ತರುವುದಕ್ಕೆ ಆಗುವುದಿಲ್ಲ. ಸಾಲವು ಸಿಗುವುದಿಲ್ಲ. ಈ ಹಿಂದೆ ಗ್ರಾಂಟ್ ಜೊತೆ ಕೇಂದ್ರಸರ್ಕಾರ ಲೋನ್ ಸಹ ಕೊಡುತ್ತಿತ್ತು. ಇನ್ನು ಮುಂದೆ ಗ್ರಾಂಟ್ ಕಾಂಪೊನೆಂಟ್ ಬರುತ್ತದೆ. ಲೋನ್ ಕಾಂಪೊನೆಂಟ್‌ನ್ನು ಕೇಂದ್ರ ಸರ್ಕಾರ ಕೊಡುವುದಿಲ್ಲ. ಆದ್ದರಿಂದ ರೂರಲ್ ಡೆವಲಪ್‌ಮೆಂಟ್‌ಗೆ ಡ್ರಿಂಕಿಂಗ್ ವಾಟರ್‌ಗೆ. ಪ್ರೈಮರಿ ಎಜುಕೇಷನ್‌ಗೆ ಇದರಿಂದಾಗಿ ತುಂಬಾ ತೊಂದರೆಯಾಗುವ ಸಂಭವವಿದೆ. ಸಾಲ ತಂದು ತುಪ್ಪ ತಿನ್ನುವಂತಹ ಕಾಲ ಹೋಗಿದೆ. ಕೇಂದ್ರಸರ್ಕಾರ ಆ ದೃಷ್ಟಿಯಿಂದ ರಾಜ್ಯಸರ್ಕಾರವನ್ನು ಒಂದು ಬಿಗಿ ಮಾಡುವಂತಹ ಪ್ರಯತ್ನವನ್ನು ಮಾಡಿದೆ. ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಅದನ್ನು ಹೇಗೆ ಮಾಡುತ್ತೀರೆಂದು ತಾವು ಯೋಚನೆಯನ್ನು ಮಾಡಿ ಹೇಳಬೇಕು. ಮಾನ್ಯ ಸಿದ್ದರಾಮಯ್ಯನವರೇ ನಾನು ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ತಮ್ಮ ಕಾಲದಲ್ಲಿ ನೀರಾವರಿ ಯೋಜನೆಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದೀರಿ. ಅದು ಕೃಷ್ಣ ಕೊಳದಲ್ಲಿ ಇರಬಹುದು. ಕಾವೇರಿ ಬೇಸಿನ್‌ನಲ್ಲಿರಬಹುದು. ಇದನ್ನು ಪೂರ್ಣ ಮಾಡಬೇಕೆನ್ನುವಂತಹ ರಾಜಕೀಯ ಇಚ್ಛಾಶಕ್ತಿ ಈ ಸರ್ಕಾರಕ್ಕೆ ಇದೆ ಎಂದು ಕಳೆದ 9 ತಿಂಗಳಲ್ಲಿ ನಮಗೆ ಅನುಭವಕ್ಕೆ ಬಂದಿಲ್ಲ. ಇದಕ್ಕಾಗಿ ತಾವು ನೀರಾವರಿ ನಿಗಮಗಳನ್ನು ಮಾಡಿದ್ದೀರಿ. ಪ್ರಭಾವಯುತವಾದ ಸಚಿವರು ಆ ನೀರಾವರಿ ಇಲಾಖೆಯನ್ನು ನೋಡಿಕೊಳ್ಳುತ್ತಿದ್ದಾರೆ. ಅದು ಕೃಷ್ಣ ಜಲಭಾಗ್ಯ ನಿಗಮ. ಕರ್ನಾಟಕ ನೀರಾವರಿ ನಿಗಮ. ಹಾಗೂ ಕಾವೇರಿ ನೀರಾವರಿ ನಿಗಮ ಇರಬಹುದು. ಆ ಬಚಾವತ್ ಆಯೋಗದ ತೀರ್ಮಾನದ ಪ್ರಕಾರ 'ಎ' ಸ್ಕೀಂನ ಪೂರ್ಣ ನೀರನ್ನು

ಇದುವರೆವಿಗೂ ಉಪಯೋಗ ಮಾಡಿಕೊಂಡಿಲ್ಲ. ಇದನ್ನು ನಾನು ಹೇಳುವುದಿಲ್ಲ. ಇದು ಎಷ್ಟು ಇತ್ತು. ಇದನ್ನು ಎಷ್ಟು ಉಪಯೋಗಿಸಿಕೊಂಡಿದ್ದೀರಿ ಎಂಬುದನ್ನು ನೀವು ಉತ್ತರವನ್ನು ಕೊಡುವಂತಹ ಸಂದರ್ಭದಲ್ಲಿ ಹೇಳಲೇಬೇಕಾಗುತ್ತದೆ. ಪಕ್ಕದ ಆಂಧ್ರದ 'ಬಿ' ಸ್ಕೀಂನಲ್ಲಿ ಬರಬೇಕಾದಂತಹ ನೀರಾವರಿ ಯೋಜನೆಗಳನ್ನು ಪೂರ್ಣಮಾಡಿಕೊಂಡು ಮುಂದೆ ಹೆಜ್ಜೆಯನ್ನು ಇಡುತ್ತಿರಬೇಕಾದರೆ ನೀವು ಆಮೆ ವೇಗದಲ್ಲಿ ಈ ಒಂದು ನೀರಾವರಿ ಯೋಜನೆಗಳನ್ನು ಮಾಡಿದರೆ ಬಹುಶಃ ಇನ್ನು 10 ವರ್ಷಗಳಾದರೂ ಕೂಡ ಬಚಾವತ್ ಆಯೋಗದ ತೀರ್ಮಾನದಂತೆ 'ಎ' ಸ್ಕೀಂನ ನೀರನ್ನು ಪೂರ್ಣ ಮಾಡಿಕೊಳ್ಳುವುದಕ್ಕೆ ಆಗದಿದ್ದರೆ ಮುಂದೆ ಏನಾಗಬಹುದು? ಕೇಂದ್ರದಲ್ಲಿ ನಿಮ್ಮ ಸರ್ಕಾರವಿದೆ. ಆಂಧ್ರದಲ್ಲಿ ನಿಮ್ಮ ಸರ್ಕಾರವಿದೆ. 'ಬಿ' ಸ್ಕೀಂನ ನಮ್ಮ ಪಾಲಿನ ನೀರನ್ನು ತೆಗೆದುಕೊಳ್ಳುವ ಬಗ್ಗೆ ಆಂಧ್ರದ ಜೊತೆ ಕೇಂದ್ರ ಸರ್ಕಾರ ಮಧ್ಯೆ ಇಂಟರ್‌ಫಿಯರ್ ಆಗಿ ಆಂಧ್ರದವರು ತಾನೆ ಈಗ ಅಡ್ಡಿ ಮಾಡುತ್ತಿರುವುದು. ಬೇರೆ ಯಾವುದೇ ರಾಜ್ಯಗಳು 'ಬಿ' ಸ್ಕೀಂನ ನದಿ ನೀರನ್ನು ಹಂಚಿಕೊಳ್ಳುವ ಬಗ್ಗೆ ಕೂಡ ಇದನ್ನು ವಿರೋಧ ಮಾಡುತ್ತಿಲ್ಲ. ಅದನ್ನು ಆಂಧ್ರ ಮಾತ್ರ ವಿರೋಧ ಮಾಡುತ್ತಿದೆ. 'ಬಿ' ಸ್ಕೀಂನ ನೀರನ್ನು ಹಂಚಿಕೊಳ್ಳುವ ಬಗ್ಗೆ 'ಎ' ಸ್ಕೀಂನ್ನು ಪೂರ್ಣಮಾಡಿಕೊಳ್ಳುವುದಕ್ಕೆ ನಿಮ್ಮ ಕಾರ್ಯಕ್ರಮವೆಲ್ಲಿದೆ? ಆ ದಿಕ್ಕಿನಲ್ಲಿ ತಾವು ಏನು ಪ್ರಾಮಾಣಿಕವಾದ ಪ್ರಯತ್ನವನ್ನು ಮಾಡುತ್ತಿದ್ದೀರಿ? ಬಚಾವತ್ ಅವಾರ್ಡ್ ಕರ್ನಾಟಕ ರಾಜ್ಯ ಮೇ 2000ದೊಳಗಾಗಿ 734 ಟಿಎಂಸಿ ನೀರನ್ನು ಉಪಯೋಗಿಸಿ ಕೊಳ್ಳಬೇಕಾಗಿತ್ತು. ಈಗ ಮಾರ್ಚ್ 2005ಕ್ಕೆ ಬಂದ್ದಿದ್ದರೂ ಸಹ ನೀವು ಈ ನೀರನ್ನು ಉಪಯೋಗವಮಾಡಿಕೊಳ್ಳದಿದ್ದರೆ ಎಷ್ಟು ಉಪಯೋಗಿಸಿಕೊಂಡಿದ್ದೀರಿ ಎಷ್ಟು ನೀರನ್ನು ಉಪಯೋಗಿಸಿಕೊಳ್ಳುವುದಕ್ಕಾಗಲ್ಲ. ಈ 734 ಟಿಎಂಸಿಯಲ್ಲಿ. ಈ ವಿವರವನ್ನು ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. 'ಬಿ'ಸ್ಕೀಂನಲ್ಲಿ ಪ್ರಾರಂಭವಾಗಿರುವಂತಹ ಯಾವುದೇ ಯೋಜನೆಯು ಇದುವರೆವಿಗೂ ಪೂರ್ಣವಾಗಿರುವುದಿಲ್ಲ. 2003–04ನೇ ಸಾಲಿನಲ್ಲಿ ನೀರಾವರಿ ಇಲಾಖೆಯಲ್ಲಿ 377.161 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. 2003–04ರಲ್ಲಿ ನಿಮ್ಮ ನೀರಾವರಿ ಇಲಾಖೆ 377.161 ಕೋಟಿ ರೂಗಳನ್ನು ಖರ್ಚು ಮಾಡಿದ್ದೀರಿ. 1,51,613 ಹೆಕ್ಟೆರ್ ಜಮೀನಿಗೆ ನೀರು ಒದಗಿಸಲು ಕಾರ್ಯಕ್ರಮ ರೂಪಿಸಿಕೊಂಡಿದ್ದೀರಿ. ಆದರೆ ಆಕ್ಚ್ಯುಯಲ್ ಹೆಚ್ಚಿಗೆ ಖರ್ಚು ಮಾಡಿದ್ದೀರಿ. 2003–04. 3130.96 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆಂದು ಲೆಕ್ಕ ಹೇಳಿದ್ದೀರಿ. ನೀರನ್ನು ಒದಗಿಸಿರುವುದು 1,51,613 ಹೆಕ್ಟೇರ್‌ಗೆ ಬದಲಾಗಿ ನೀವು ನೀರನ್ನು ಒದಗಿಸಿರುವುದು 68.214 ಹೆಕ್ಟ್ಟಾರ್ ಜಮೀನಿಗೆ ಮಾತ್ರ.

ಇದು 2003–04 ಕರ್ಮಕಥೆ. 2004–05ನೇ ಸಾಲಿನಲ್ಲಿ ಇದು ನಿಮ್ಮ ಕಾಲದಲ್ಲಿ ಸುಮಾರು 3.024 ಕೋಟಿ ರೂಪಾಯಿಗಳು ಇಲ್ಲಿಯವರೆಗೆ ಖರ್ಚು ಮಾಡಿದ್ದೀರಿ. 1,19,928 ಹೆಕ್ಟೇರ್‌ಗೆ ಮಾರ್ಚ್ –5ರೊಳಗ್ಗೆ ನೀರನ್ನು ಒದಗಿಸಿದ್ದೇವೆಂದು ಹೇಳಿದ್ದೀರಿ. ನಿಮ್ಮ ಉದ್ದೇಶ ಅದು ಆಗಿತ್ತು. ನನಗೆ ಲಭ್ಯವಿರುವಂತಹ ಮಾಹಿತಿ ಪ್ರಕಾರ ಜನವರಿ 2005ರವರೆಗೆ ಸುಮಾರು. 2.100 ಕೋಟಿ ರೂಪಾಯಿಗಳು ಖರ್ಚು ಮಾಡಿ ಕೇವಲ 29.423 ಹೆಕ್ಟರ್ ಜಮೀನಿಗೆ ಮಾತ್ರ ನೀರನ್ನು ಒದಗಿಸಿದ್ದೀರಿ. ನೀವು ತಜ್ಞರನ್ನು ಕರೆಸಿ ಅಂಕಿಅಂಶಗಳನ್ನು ನೋಡಬಹುದು. ನಾನು ಬೇಕಾದರೆ ರಿಪೀಟ್ ಮಾಡುತ್ತೇನೆ. 2005ರವರೆಗೆ ಜನವರಿ 2100 ಕೋಟಿ ರೂಪಾಯಿಗಳನ್ನು ನೀರಾವರಿ ಇಲಾಖೆಗೆ ಖರ್ಚು ಮಾಡಿ ಕೇವಲ 29,423 ಹೆಕ್ಟರ್ ಜಮೀನಿಗೆ ನೀರನ್ನು ಒದಗಿಸಿದ್ದೀರಿ. ನೀರನ್ನು ಒದಗಿಸಬೇಕೆಂಬ ಉದ್ದೇಶವಿದ್ದದ್ದು 1,19,928 ಹೆಕ್ಟೇರ್ ಇತ್ತು. ಇನ್ನು ಎರಡು ತಿಂಗಳಿನಲ್ಲಿ ಈಗಿನ ಪ್ರಕಾರ ಇನ್ನು ಒಂದೂವರೆ ತಿಂಗಳು ಇದೆ. ಇನ್ನು ನೀವು 900 ಕೋಟಿ ರೂಪಾಯಿಗಳನ್ನು ನೀವು ಖರ್ಚು ಮಾಡಬೇಕು. 90 ಸಾವಿರ ಹೆಕ್ಟೇರ್ ನೀರನ್ನು ಒದಗಿಸಬೇಕು ಇದು ನಿಮ್ಮ ಅಂದಾಜಿನ ಪ್ರಕಾರ ಆಗಿದೆ. ನೀರಾವರಿ ಇಲಾಖೆ ಕಳೆದ ಎರಡು ವರ್ಷಗಳಿಂದ ನೈಜವಾದಂತಹ ಕಾರ್ಯಕ್ರಮವನ್ನು ಹಾಕಿಕೊಳ್ಳಲಿಲ್ಲ. ಅದರ ಬಗ್ಗೆ ಯಾವುದೇ ಪೊಲಿಟಿಕಲ್ ವಿಲ್‌ನ್ನು ತೋರಿಸಿಲಿಲ್ಲ. ಹಣವನ್ನು ನೀರಿನಂತೆ ಪೋಲು ಮಾಡಿದರೆ ಹೊರತು ಅನುಪಯುಕ್ತ ಕೆಲಸಗಳಿಗೆ ಹಣವನ್ನು ಖರ್ಚು ಮಾಡಿದರೆ ಹೊರತು ನೀರಾವರಿ ಯೋಜನೆಗಳನ್ನು ಪೂರ್ಣ ಮಾಡುವ ಬಗ್ಗೆ ತಾವು ಯೋಚನೆಯನ್ನು ಮಾಡಲಿಲ್ಲ ಉದಾಹರಣೆಗೆ ಹೇಳುವುದಾದರೆ ಕೃಷ್ಣ ಮೇಲ್ದಂಡೆ ಯೋಜನೆ ಸಾಲಿನಲ್ಲಿ 1,406.65 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 9559 ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸಿದ್ದೀರಿ. ಇದುವರೆವಿಗೆ ನೀವು ನೀರನ್ನು ಒದಗಿಸಿರುವುದು 1406.65 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 9559 ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸಿದ್ದೀರಿ. ಇನ್ನು ಎರಡು ತಿಂಗಳಲ್ಲಿ 600 ಕೋಟಿ ರೂ. ಇನ್ನು ಒಂದೂವರೆ ತಿಂಗಳು ಮಾತ್ರ ಇದೆ 550 ಕೋಟಿ ರೂಗಳನ್ನು ಖರ್ಚು ಮಾಡಬೇಕು. ಇನ್ನು 32.440 ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸುವುದಕ್ಕೆ ಸಾಧ್ಯವೇ? ಇದರ ಬಗ್ಗೆ ನೀರಾವರಿ ಇಲಾಖೆಯು ಏನು ಮಾಡುತ್ತಿದೆ? ಮಂತ್ರಿಗಳು ಏನು ಮಾಡುತ್ತಿದ್ದಾರೆ? ಘಟಪ್ರಭ ಯೋಜನೆ. ಈ ಸಾಲಿನಲ್ಲಿ 120 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 20 ಸಾವಿರ ಹೆಕ್ಟೇರ್ ಜಮೀನಿಗೆ ನೀರನ್ನು ಒದಗಿಸುವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ. ಜನವರಿ ಅಂತ್ಯದವರೆವಿಗೆ 54.66 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ.

ನೀರನ್ನು ಒದಗಿಸಿರುವುದು ಕೇವಲ 5332 ಹೆಕ್ಟೇರ್ ಜಮೀನಿಗೆ ಮಾತ್ರ. ಮಲಪ್ರಭಾದ ಬಗ್ಗೆ ಹೇಳುವುದಾದರೆ 40 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ 5 ಸಾವಿರ ಹೆಕ್ಟೇರ್‌ಗೆ ನೀರನ್ನು ಒದಗಿಸುತ್ತೇವೆಂದು ಹೇಳಿದ್ದೀರಿ. ಜನವರಿ ಅಂತ್ಯದವರಿಗೆ 31 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ನೀರನ್ನು ಒದಗಿಸಿರುವುದು 5 ಸಾವಿರ ಹೆಕ್ಟೇರ್ ಬದಲಿಗೆ ಕೇವಲ 706 ಹೆಕ್ಟೇರ್ ಮಾತ್ರ. ಇದೇ ರೀತಿಯಾಗಿ ನೀರಾವರಿ ಇಲಾಖೆಯಲ್ಲಿ ಯಾವುದೇ ಯೋಜನೆ ಇರಬಹುದು. ಇದೇ ಪರಿಸ್ಥಿತಿ ಇದೆ. 2004–05ರಲ್ಲಿ ಕಾವೇರಿ ಬೇಸಿನ್. ಈ ಕಾವೇರಿ ನೀರಾವರಿ ನಿಗಮದಡಿಯಲ್ಲಿ ಇರುವಂತಹ ಎಲ್ಲ ಕೆಲಸಗಳಿಗೆ 3250 ಕೋಟಿ ರೂಪಾಯಿಗಳು ಬೇಕಾಗಿರುವಂತಹ ಮೊತ್ತವಾಗಿದೆ. 2004–05ನೇ ಸಾಲಿಗೆ ಕೊಟ್ಟಿರುವಂತಹ ಹಣ ಕೇವಲ 250 ಕೋಟಿ ರೂಗಳು. ನೀರಾವರಿ ಸಚಿವರಿಗೂ ಸರ್ಕಾರ ಅಥವಾ ಹಣಕಾಸಿನ ಸಚಿವರಿಗೆ ಸಂಬಂಧಗಳು ಏನಿದೆ ಎಂಬುದು ನನಗೆ ಗೊತ್ತಿಲ್ಲ. ಆದರೆ ನೀವು ಯಾವ ಕ್ಷೇತ್ರಕ್ಕೆ ಆಧ್ಯತೆ ಮೇಲೆ ಹಣವನ್ನು ಕೊಡಬೇಕಾಗಿತ್ತೋ. ನಿಮ್ಮ ಆದ್ಯತೆಯೂ ಹಾಸನದ ಕಡೆ ಮಾತ್ರ ಇದೆಯೋ ಅಥವಾ ನೀರಾವರಿ ಇಲಾಖೆಯ ಕಡೆ ಇದೆಯೋ ಅನುಮಾನ ಬರುವಂತಹ ರೀತಿಯಲ್ಲಿ ತಾವು ಹಣವನ್ನು ಕೊಟ್ಟಿದ್ದೀರಿ. ಗುತ್ತಿಗೆದಾರರಿಗೆ ಕೂಡ ಬೇಕಾಗಿರುವ ಬಿಲ್ ಎಷ್ಟು ಸ್ವಾಮಿ? 324 ಕೋಟಿ ರೂಪಾಯಿಗಳು ಬಾಕಿ ಇದೆ. ಪೆಂಡಿಂಗ್ ಬಿಲ್ಸ್ 2004–05ನೇ ಸಾಲಿನಲ್ಲಿ ನೀವು ಹಣವನ್ನು ಕೊಟ್ಟಿರುವುದು 250 ಕೋಟಿ ರೂಪಾಯಿಗಳನ್ನು ಮಾತ್ರ ಕೊಟ್ಟಿದ್ದೀರಿ. ಈ ಸಾಲಿಗೆ ಕೊಟ್ಟಿರುವಂತಹ ಹಣ ಗುತ್ತಿಗೆದಾರರಿಗೆ ಬಾಕಿ ಕೊಡುವುದಕ್ಕೆ ಸಾಧ್ಯವಿಲ್ಲ. ಈ ಕಾವೇರಿ ಬೇಸಿನ್‌ನಲ್ಲಿರುವಂತಹ ರೈತರು ಏನು ಮಾಡಬೇಕು? ಏಕೇ ಆಕ್ರೋಶ ಮತ್ತು ಸಿಟ್ಟು ನೀವು ಆ ಕ್ಷೇತ್ರದಿಂದ ಬಂದಿಲ್ಲವಾ? ಮುಖ್ಯಮಂತ್ರಿಗಳೇ ಪ್ರತಿನಿಧಿಸುತ್ತಿದ್ದಾರೆ. ನೀವು ಈ ಅಂಕಿಅಂಶಗಳನ್ನು ನೋಡಿ ಹೌದು ಅಥವಾ ಅಲ್ಲವೋ ಎಂಬುದನ್ನು ನೋಡಬೇಕು. ಇದನ್ನು ತಾವು ತೆಗೆದು ನೋಡಬೇಕು. ಈ ವರ್ಷ ಕೊಟ್ಟಿರುವುದು 250 ಕೋಟಿ ರೂಗಳನ್ನು ಕೊಡುವುದಕ್ಕೆ ಹೋದರೆ ಈ ಕಾವೇರಿ ಬೇಸಿನ್ ವರ್ಕ್ ಮುಗಿಸಬೇಕಾದರೆ ಇನ್ನು 13 ವರ್ಷಗಳು ಬೇಕಾಗುತ್ತದೆ. ಇದೇ ರೇಟಿನಲ್ಲಿ ನೀವು ಹಣವನ್ನು ಕೊಟ್ಟರೆ ಇನ್ನು 10 ರಿಂದ 13 ವರ್ಷಗಳಾದರೂ ಇದು ಪೂರ್ಣವಾಗುವುದಿಲ್ಲ. ಇನ್ನು ಕರ್ನಾಟಕ ನೀರಾವರಿ ನಿಗಮದ ಬಗ್ಗೆ ಹೇಳುವುದಾದರೆ. ನಾನು ಮುಂದಿನ ವಿಷಯವನ್ನು ಮಾತನಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ. ನಮಗೆ ವಿಶ್ವಾಸವೇ ಇಲ್ಲ. ನಾನು 2004–05ನೇ ಸಾಲನ್ನು ಬಿಟ್ಟು ಮುಂದಕ್ಕೆ ಹೋಗುತ್ತಿಲ್ಲವೆಂದರೆ. ಮುಂದೆ ನೀವು ಇರುವುದಿಲ್ಲವೆಂಬ ವಿಶ್ವಾಸ ನಮಗೆ ಇದೆ.

2004–05ನೇ ಸಾಲಿನಲ್ಲಿ ಏನು ಆಗಿದೆ ಇಲ್ಲವೆಂಬ ಬಗ್ಗೆ ಅಂಕಿಅಂಶವನ್ನು ನೀವು ಕೊಡುತ್ತಿಲ್ಲ. ನೀವು ಅದನ್ನು ಕೊಟ್ಟಿದ್ದರೆ ನಾವು ಅದನ್ನು ಹಿಡಿದುಕೊಂಡು ಮಾತನಾಡಬಹುದಿತ್ತು. ಕರ್ನಾಟಕ ನೀರಾವರಿ ನಿಗಮದ ಬಗ್ಗೆ ನಿಮಗೆ ಗೊತ್ತಿದೆ. ಈ ಎಲ್ಲಾ ಕಾಮಗಾರಿಗಳಿಗೆ ನೀವೇ ಹೇಳಿರುವಂತಹ ಪ್ರಕಾರ ಪೂರ್ಣವಾಗುವುದಕ್ಕೆ 3130 ಕೋಟಿ ರೂಪಾಯಿಗಳು ಬೇಕಾಗುತ್ತದೆ. 2004–05ನೇ ಸಾಲಿನಲ್ಲಿ ಕೊಟ್ಟಿರುವಂತಹ ಹಣ ಕೇವಲ 375 ಕೋಟಿ ರೂಪಾಯಿಗಳು ಮಾತ್ರ. ಕರ್ನಾಟಕ ನೀರಾವರಿ ನಿಗಮ ಆ ಯೋಜನೆಯನ್ನು ಪೂರ್ಣ ಮಾಡುವುದಕ್ಕೆ 3130 ಕೋಟಿ ರೂಪಾಯಿಗಳು ಬೇಕು. ನೀವು ಕೊಟ್ಟಿರುವಂತಹ ಹಣ ಕೇವಲ 375 ಕೋಟಿ ರೂಪಾಯಿಗಳು. ಈ ರೇಟ್‌ನಲ್ಲಿ ನೀವು ಹಣವನ್ನು ಕೊಟ್ಟರೆ ಇನ್ನು 8 ವರ್ಷಗಳು ಪೂರ್ತಿ ಮಾಡುವುದಕ್ಕೆ ಬೇಕಾಗುತ್ತದೆ. ಕೃಷ್ಣ ಜಲ ಕಾವೇರಿ ಜಲ ನಿಗಮ ಇವೆಲ್ಲವನ್ನು ತೆಗೆದ ಮೇಲೆ ಅದಕ್ಕೆ ಬೇಕಾದಂತಹ ಹಣವನ್ನು ಎತ್ತಿ ಪೂರ್ತಿ ಮಾಡಬೇಕೆಂದು ನಿಗಮಗಳನ್ನು ತೆಗೆದ ಮೇಲೆ ಆ ದಿಕ್ಕಿನಲ್ಲಿ ನಿಮ್ಮದು ಯಾವುದೇ ಪ್ರಯತ್ನಗಳು ಇಲ್ಲವಲ್ಲಾ? ಕೃಷ್ಣ ಜಲಭಾಗ್ಯ ನಿಗಮ ಇಲ್ಲಿ ಎಲ್ಲಾ ಕಾಮಗಾರಿಗಳನ್ನು ಮುಗಿಸುವುದಕ್ಕೆ 12796 ಕೋಟಿ ರೂಪಾಯಿಗಳು ಬೇಕೆಂದು ನಿಮ್ಮ ಅಂದಾಜು ಇದೆ. ಮಾರ್ಚಿ 2004ರ ಅಂತ್ಯದವರೆವಿಗೆ ನೀವು ಖರ್ಚು ಮಾಡಿರುವಂತಹ ಹಣ 9973 ಕೋಟಿ ರೂಪಾಯಿಗಳು ಮಾತ್ರ. 2004–05 ನೇ ಸಾಲಿನ ಕಾರ್ಯಕ್ರಮ ಜನವರಿಗೆ 2005 ರವರೆವಿಗೆ ಆಗಿರುವಂತಹ ವೆಚ್ಚ 1406 ಕೋಟಿ ರೂಗಳು ಮಾತ್ರ. ಈ ವರ್ಷ ಖರ್ಚು ಮಾಡಬೇಕಾಗಿರುವಂತಹ ಹಣ 603 ಕೋಟಿ ರೂಪಾಯಿಗಳು. ನೀವು ಆಧ್ಯತೆ ಮೂಲಕವಾಗಿ ಯಾವ ರೀತಿಯಾಗಿ ಕೆಲಸವನ್ನು ಮಾಡಬೇಕಾಗಿತ್ತೋ. ಅದನ್ನು ತಾವು ಮಾಡಲಿಲ್ಲ. 2005–06ನೇ ಸಾಲಿಗೆ ನೀರಾವರಿ ಇಲಾಖೆಗೆ ನೀವು 3942 ಕೋಟಿ ರೂ ಪಾಯಿಗಳನ್ನು ಮೀಸಲಿಟ್ಟರೆ ಸುಮಾರು 2 ಸಾವಿರ ಕೋಟಿ ರೂಪಾಯಿಗಳು ಈಗ ನೀರಾವರಿಗಳಿಗಾಗಿ ಮಾಡಿರುವಂತಹ ಸಾಲ ಮರುಪಾವತಿಗೆ ಬಡ್ಡಿಗೆ ನೀವು ಕೊಡಬೇಕಾಗುತ್ತದೆ. ಈ ಯೋಜನೆಗಳನ್ನು ಪೂರ್ಣ ಮಾಡುವ ಕಡೆಗೆ ನನ್ನ ಹತ್ತಿರ 50 ಪ್ರಾಜೆಕ್ಟ್‌ಗಳು ಇವೆ. ನೀವು ಯಾವುದೇ ಯೋಜನೆಯನ್ನು ಪೂರ್ಣ ಮಾಡುವ ಪ್ರಾಮಾಣಿಕವಾದಂತಹ ಪ್ರಯತ್ನವನ್ನು ಮಾಡಿಲ್ಲ. ಒಂದು ಕಡೆ ನಬಾರ್ಡ್‌ನಿಂದ ನೀರಾವರಿ ಅಭಿವೃದ್ಧಿಗಾಗಿ ಕೇಂದ್ರ ಅನುದಾನವನ್ನು ಕೊಟ್ಟಿದೆಯಲ್ಲಾ ನೀವು ಹೇಗೆ ಮಾಡಿದ್ದೀರಿ. ಹಣಕಾಸಿನ ಸಚಿವರಾಗಿ ತಾವು ಉತ್ತರವನ್ನು ಕೊಡುತ್ತಾ ಇದರ ಬಗ್ಗೆ ತಾವು ದಯಮಾಡಿ ಹೇಳಬೇಕು. ನಬಾರ್ಡ್ 2001–02ಕ್ಕೆ 21.4 ಲಕ್ಷ ರೂಪಾಯಿಗಳನ್ನು ಕೊಟ್ಟರು. ನೀವು ಖರ್ಚು ಮಾಡಿರುವುದು

27.6 ಲಕ್ಷ ರೂಪಾಯಿಗಳು 2003–04ನೇ ಸಾಲಿಗೆ ಹೋದ ವರ್ಷ 86.39 ಲಕ್ಷ ರೂಪಾಯಿಗಳು. ಖರ್ಚು ಮಾಡಿರುವುದು 28.77 ಲಕ್ಷ ರೂಪಾಯಿಗಳು. ಒಟ್ಟು ಈ ಮೂರು ವರ್ಷಗಳಲ್ಲಿ 158.52 ಲಕ್ಷ ರೂಪಾಯಿಗಳನ್ನು ಕೊಟ್ಟರೆ. 69.74 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೀರಿ. ಇಲ್ಲಿ ಅಧಿಕಾರಿಗಳು ಇದ್ದಾರೆ. ಮಾನ್ಯ ಸಿದ್ದರಾಮಯ್ಯನವರೆ ಹಣಕಾಸಿನ ಸಚಿವರೆ ತಾವು ಉತ್ತರವನ್ನು ಕೊಡುವಂತಹ ಸಮಯದಲ್ಲಿ ಹೇಳಬೇಕು. ನೀವು ಮಾರ್ಚಿ 31ರೊಳಗಾಗಿ ನೀವು ಹಣವನ್ನು ಖರ್ಚು ಮಾಡದೆ ಇದ್ದರೆ ಲ್ಯಾಪ್ಸ್ ಆಗುತ್ತದೆ. ಇದಕ್ಕೆ ಯಾರು ಜವಾಬ್ದಾರರು ಎಂದು ಹೇಳಬೇಕಾಗುತ್ತದೆ. ನಿಮ್ಮ ಹತ್ತಿರ ಹಣವಿಲ್ಲ. ನಬಾರ್ಡ್ ಮೂಲಕ ನಿಮಗೆ ಕೊಟ್ಟಂತಹ ಹಣವನ್ನು ಖರ್ಚು ಮಾಡುವುದಕ್ಕೆ ನಿಮಗೆ ಏನು ತೊಂದರೆಯಾಗಿದೆ? ಸುಮಾರು 88.78 ಲಕ್ಷ ರೂಪಾಯಿಗಳು ಕಳೆದ 2001–02. 2002–03. 2003–04ನೇ ಸಾಲುಗಳಿಗೆ ಕೊಟ್ಟಂತಹ ಹಣ 158.52 ಲಕ್ಷ ರೂಪಾಯಿಗಳಾದರೆ ಖರ್ಚು ಮಾಡಿರುವಂತಹ ಹಣ 69.74 ಲಕ್ಷ ರೂಪಾಯಿಗಳು. ಇನ್ನು 88.78 ಲಕ್ಷ ರೂಪಾಯಿಗಳು ಖರ್ಚು ಮಾಡದೆ ಅದು ನಿಮ್ಮ ಹತ್ತಿರ ಇದೆ. ಇನ್ನು ಒಂದು ತಿಂಗಳಿನಲ್ಲಿ ಎಷ್ಟು ಖರ್ಚು ಮಾಡುತ್ತೀರೋ ಗೊತ್ತಿಲ್ಲ. ತಿಂಗಳಲ್ಲಿ ಈಗ ನಾವು ಮಾರ್ಚಿಯಲ್ಲಿದ್ದೇವೆ. ಆ ಹಣ ಲ್ಯಾಪ್ಸ್ ಆಗುತ್ತದೆ ಅದನ್ನು ತಾವು ವಾಪಸ್ಸು ಕೊಡಬೇಕಾಗುತ್ತದೆ. ಮುಂದೆ ನಬಾರ್ಡ್‌ನಿಂದ ನಿಮಗೆ ಹಣ ಕೊಡುವಂತಹ ಪ್ರಯತ್ನವು ಆಗುವುದಿಲ್ಲ. ಯಾರೂ ನಿಮಗೆ ಮುಂದೆ ಬರುವುದಿಲ್ಲ. ಲೋಕಸಭೆಯಲ್ಲಿ ರಾಜ್ಯದ ನೀರಾವರಿ ಯೋಜನೆಗಳಿಗೆ ಗ್ರಾಮೀಣ ಮೂಲ ಸೌಕರ್ಯ ಅಭಿವೃದ್ಧಿ ನಿಧಿಯಿಂದ ನಬಾರ್ಡ್ ಮೂಲಕವಾಗಿ ಕೊಟ್ಟಂತಹ 31.79 ಲಕ್ಷ ರೂಪಾಯಿಗಳು ಕೈತಪ್ಪಿ ಹೋಗುತ್ತದೆಂದು ಲೋಕಸಭೆಯಲ್ಲಿ ಉತ್ತರವನ್ನು ಕೊಟ್ಟಿದ್ದಾರೆ. ಇದು ಹೇಗಾಯಿತು. ಇದನ್ನು ಹೇಗೆ ಸರಿಪಡಿಸುತ್ತೀರಿ ಇದರ ಬಗ್ಗೆಯೂ ಸಹ ತಾವು ಉತ್ತರವನ್ನು ಕೊಡಬೇಕಾಗುತ್ತದೆ. ಬಹಳ ದಿನಗಳ ಕಾಲ ನಾವು ಬೊಬ್ಬೆಯನ್ನು ಹೊಡೆದೆವು ಕಳಾಸಬಂಡೂರಿನಾಲಾ ಆಗಬೇಕೆಂದು ಹೇಳಿದೆವು. ಇದರಿಂದ ಧಾರವಾಡಕ್ಕೆ ಕುಡಿಯುವ ನೀರಿಗೆ ಅನುಕೂಲವಾಗುತ್ತದೆ. ಆ ಯೋಜನೆಗಳಿಗೆ ಅನುಕೂಲವಾಗುತ್ತದೆ. ಗೋವಾ ಸರ್ಕಾರದ ಮನವೊಲಿಸಿ ಮಾಡಬೇಕೆಂಬುದರ ಕಡೆಗೆ ಯಾವುದೇ ಒಂದು ಪ್ರಾಮಾಣಿಕವಾದಂತಹ ಪ್ರಯತ್ನ ನಿಮ್ಮಿಂದ ಆಗಿಲ್ಲ. ಸಂಸತ್ತಿನಲ್ಲಿ ಮಾನ್ಯ ಮಲ್ಲಿಕಾರ್ಜನಯ್ಯನವರು ಪ್ರಶ್ನೆಯನ್ನು ಕೇಳಿದಾಗ ಅದು ಮೊನ್ನೆ ಪತ್ರಿಕೆಯಲ್ಲಿ ಬಂದಿದೆ. ಭದ್ರಾ ಮೇಲ್ದಂಡೆ ಯೋಜನೆಗೆ ಹಣಕಾಸು ಬೇಕೆಂದು ಕೇಂದ್ರಸರ್ಕಾರಕ್ಕೆ ಮನವಿಯನ್ನು ಕೊಟ್ಟಿಲ್ಲವೆಂದು ಅಲ್ಲಿಯ ಜಲಸಂಪನ್ಮೂಲ ಸಚಿವರು

ಉತ್ತರ ಕೊಟ್ಟಿದ್ದಾರೆ. ಇಷ್ಟು ನಿರ್ಲಕ್ಷ್ಯ ನೀರಾವರಿ ಯೋಜನೆಗಳ ಬಗ್ಗೆ ತಾವು ಮಾಡಿದ್ದೀರಿ. ಇಷ್ಟು ನೀರಾವರಿಯ ಬಗ್ಗೆ ಇರುವ ಪರಿಸ್ಥಿತಿ. ಇನ್ನು ಬರಗಾಲದ ಪರಿಸ್ಥಿತಿ ಏನು ಸ್ವಾಮಿ? ಕಳೆದ 4 ವರ್ಷಗಳಿಂದ ಸತತವಾಗಿ ಬರಗಾಲವಿದೆ. ಒಬ್ಬ ರೈತನ ಮಗನಾಗಿ ಉಪಮುಖ್ಯಮಂತ್ರಿಯಾಗಿ. ಹಣಕಾಸಿನ ಸಚಿವರಾಗಿ ತಾವು ಕೆಲಸವನ್ನು ಮಾಡುವಂತಹ ಅವಕಾಶ ನಿಮಗೆ ಸಿಕ್ಕಿದೆ. ಶಾಶ್ವತವಾಗಿ ರೈತರನ್ನು ಉಳಿಸುವಂತಹ ಕಾರ್ಯಕ್ರಮ ರೂಪಿಸುವ ಬಗ್ಗೆ ನಿಮಗೆ ಬಿಡುವಾಯಿತೆ ಯೋಚನೆ ಮಾಡುವ ಬಗ್ಗೆ ನಿಮಗೆ ಹಾಗೂ ಮುಖ್ಯಮಂತ್ರಿಗಳಿಗೆ. 4 ವರ್ಷಗಳಿಂದ ಸತತ ಬರಗಾಲವಿದ್ದರೂ ಸಹ ಒಂದು ತಾತ್ಕಾಲಿಕವಾದಂತಹ ಕಾರ್ಯಕ್ರಮ ಮಾಡಿ ಕಣ್ಣೊರೆಸಿ ಕೈಒರೆಸಿಕೊಳ್ಳುವಂತಹ ಕೆಲಸವನ್ನು ಮಾಡುತ್ತಿದ್ದೀರಿ ಹೊರತು ಅದಕ್ಕೇನಾದರೂ ಅನುಕೂಲ ಮಾಡಿಕೊಡುವಂತಹ ಯಾವುದೇ ಒಂದು ಪ್ರಾಮಾಣಿಕವಾದಂತಹ ಪ್ರಯತ್ನ ನೀವು ಮಾಡಲಿಲ್ಲ. ನಾನು ನಿಮ್ಮನ್ನು ಕೇಳುತ್ತೇನೆ. ಹೋದ ಬಜೆಟ್‌ನಲ್ಲಿ 2003-04 ರೈತರ ಸಾಲದ ಮೇಲೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆಂದು ಹೇಳಿದ್ದೀರಿ ತಾನೇ. ಒಂದು ವರ್ಷವಾಯಿತು ಈಗಲೂ ಕೂಡ ಹಳೆಯ ರಾಗವನ್ನು ಹೇಳುತ್ತಿದ್ದೀರಿ. 31-3-2004ರೊಳಗೆ ಬಡ್ಡಿಯನ್ನು ಮನ್ನಾ ಮಾಡುತ್ತೇವೆ. ಜೂನ್‌ನೊಳಗಡೆ ಸಾಲವನ್ನು ಕಟ್ಟಿದರೆ ಮಾತ್ರ. ಈ ವರ್ಷವು ಬರಗಾಲವಿದೆ ತಾನೇ. ನಾನು ಸರ್ಕಾರವನ್ನು ಆಗ್ರಹ ಮಾಡುತ್ತಿದ್ದೇನೆ. ರೈತರು ಬೀದಿಗಿಳಿದು ಹೋರಾಟ ಮಾಡುವಂತಹ ಅವಕಾಶವನ್ನು ತಾವು ಕೊಡಬೇಡಿ. ರೈತರ ಕೋ-ಆಪರೇಟೀವ್ ಲೋನ್ ಮೇಲಿರುವಂತಹ ಸಂಪೂರ್ಣ ಬಡ್ಡಿಯನ್ನು 31-3-2005ರವರೆಗೆ ನೀವು ವಿಸ್ತರಣೆ ಮಾಡಬೇಕಾಗಿದೆ. ಈ ವರ್ಷವು ಬರಗಾಲ ತಾನೇ ಹೋದ 31-3-2004ರ ಬಡ್ಡಿಯನ್ನು ಮನ್ನಾ ಮಾಡುತ್ತೇವೆ. ಅದು ಜೂನ್‌ನೊಳಗಡೆ ಹಣವನ್ನು ಕಟ್ಟಿ ಎಂದರೆ ಅವರಿಗೆ ಹಣ ಕಟ್ಟುವುದಕ್ಕೆ ಎಲ್ಲಿದೆ? ಬೆಳೆ ಬಂದು ಒಂದಿಷ್ಟು ಕಾಸು ಸಿಕ್ಕಿದ ಮೇಲೆ ತಾನೇ ಸಾಲವನ್ನು ಕಟ್ಟುವುದಕ್ಕೆ ಆಗುತ್ತದೆ. ಅದಕ್ಕಾಗಿ ನಾನು ಸರ್ಕಾರವನ್ನು ಒತ್ತಾಯ ಮಾಡುತ್ತಿದ್ದೇನೆ. ಸಾಲ ಮನ್ನಾ ಮಾಡಿ ಎನ್ನುವುದು ಬೇಡಿಕೆ ಇದೆ. 11ನೇ ಹಣಕಾಸಿನ ಆಯೋಗದವರು ಬಂದಾಗ ನೀವು ಏನು ಕೇಳಿದ್ದೀರಿ. ನೀವು ಹಾಗೂ ದೇವೇಗೌಡರು ಸೇರಿ ಏನು ಕೇಳಿದ್ದೀರಿ. ಒಂದು ಬಾರಿ ರಾಜ್ಯದ ರೈತ ಸಂಪೂರ್ಣ ಸಾಲ ಮನ್ನಾ ಆಗಬೇಕು. (ಒನ್‌ಟೈಮ್) ಅವನು ನೆಮ್ಮದಿಯಿಂದ ಬದುಕುವಂತಹ ವ್ಯವಸ್ಥೆಯಾಗಬೇಕು. ಇದನ್ನು ನೀವೇ ಕೇಳಿರುವುದಾಗಿದೆ. ನೀವು ಸತತವಾಗಿ 4 ವರ್ಷಗಳ ಕಾಲ ಬರಗಾಲಕ್ಕೆ ತುತ್ತಾಗಿರುವಂತಹ ರೈತನಿಗೆ. ರೈತರನ್ನು ಉದ್ಧಾರ ಮಾಡುತ್ತೇವೆಂದು

ಬೆಳಗಿನಿಂದ ಸಾಯಂಕಾಲದವರೆಗೆ ಬೊಬ್ಬೆ ಹೊಡೆಯುತ್ತೀರಿ ಆದರೆ ಬಡ್ಡಿ ಮನ್ನಾ ಮಾಡುವುದಕ್ಕೆ 31–3–2004ರವರೆಗೆ ಮಾತ್ರ ಮಾಡುತ್ತೇವೆಂದರೆ ಈ ವರ್ಷ ಸಾಲ ಮಾಡಿರುವವನಿಗೆ ಅವನ ಪರಿಸ್ಥಿತಿ ಏನಾಗಬಹುದು?31–3–2005ರವರೆಗೆ ಈ ಅವಧಿಯನ್ನು ತಾವು ವಿಸ್ತರಣೆ ಮಾಡಬೇಕು. ಆ ರೈತನ ಸಾಲದ ಮೇಲಿರುವಂತಹ ಸಂಪೂರ್ಣ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡಬೇಕು. ಈ ಅಸಲು ಕಟ್ಟುವುದಕ್ಕೆ ಜೂನ್ ಅಲ್ಲ ಡಿಸೆಂಬರ್‌ರವರೆವಿಗೆ ಅವಧಿಯನ್ನು ವಿಸ್ತರಣೆ ಮಾಡಬೇಕೆನ್ನುವಂತಹ ಒತ್ತಾಯವನ್ನು ನಾನು ಈ ಸಂದರ್ಭದಲ್ಲಿ ಸನ್ಮಾನ್ಯ ಛೇರ್ಮನ್‌ರವರೆ ನಾನು ಮಾಡುತ್ತಿದ್ದೇನೆ. ಕಳೆದ ನಾಲ್ಕು ವರ್ಷಗಳಲ್ಲಿ. ಕೇಂದ್ರ ಸರ್ಕಾರದ ಬಗ್ಗೆ ನಿಮ್ಮ ಸರ್ಕಾರ ಏನು ಬೊಬ್ಬೆ ಹೊಡೆಯುತ್ತಿತ್ತು. ಕೇಂದ್ರದಲ್ಲಿ ಅಟಲ್ ಬಿಹಾರಿ ವಾಜಪೇಯಿ ಸರ್ಕಾರವಿದೆ. ಬರಗಾಲಕ್ಕೆ ಸರಿಯಾದ ರೀತಿಯಲ್ಲಿ ಅನುಕೂಲ ಮಾಡಿಕೊಡುತ್ತಿಲ್ಲ. ಅಕ್ಕಿ ಕೊಡುತ್ತಿಲ್ಲ. ಗೋಧಿ ಕೊಡುತ್ತಿಲ್ಲ. ಅಂತ ಬೊಬ್ಬೆ ಹೊಡೆದಿರಿ. ಇವತ್ತು ನಿಮ್ಮ ಸರ್ಕಾರ ಕೇಂದ್ರದಲ್ಲಿದೆ. 2001–2002ಕ್ಕೆ ಫುಡ್ ಗ್ರೇನ್ಸ್ 1.00 ಲಕ್ಷ ಮೆಟ್ರಿಕ್ ಟನ್ ಬಂದಿತ್ತು. ದುಡ್ಡು 58.72 ಕೋಟಿ ರೂಪಾಯಿ ಬಂದಿತ್ತು. compartive figure ಕೊಡುತ್ತಿದ್ದೇನೆ ನಿಮಗೆ. 2001–02ಕ್ಕೆ 1.00 ಲಕ್ಷ ಮೆಟ್ರಿಕ್ ಟನ್ ಅಕ್ಕಿ ಬಂದಿದ್ದರೆ. 58.72 ಲಕ್ಷ ರೂ. ದುಡ್ಡು ಬಂದಿತ್ತು. 2002–2003 ರಲ್ಲಿ ವಾಜಪೇಯಿ ಸರ್ಕಾರಕ್ಕೆ ಹೆಗ್ಗಳಿಕೆಯಿಂದ ನಾನು ಅಭಿನಂದನೆಯನ್ನು ಸಲ್ಲಿಸುತ್ತೇನೆ. ಏಕೆಂದರೆ ಅವರಿಂದ ಐದು ಲಕ್ಷದ ಮೂವತ್ತು ಸಾವಿರ ಮೆಟ್ರಿಕ್ ಟನ್ ಅಕ್ಕಿ ಬಂದಿತ್ತು. ಹಣ 258.54 ಲಕ್ಷ ರೂಪಾಯಿ ಬಂತು. ಹಣಕಾಸು ಸಚಿವರೇ ಫಿಗರ್ ಅವರ ಕಿವಿಗೆ ಬೀಳಬೇಕಾಗಿದೆ. ಇವರೆಲ್ಲಾ ಟೀಕೆ ಮಾಡಿದ್ದಾರೆ. ನಾನು ಸದನದ ಗಮನಕ್ಕೆ ತರಲಿಚ್ಚಿಸುವುದೇನೆಂದರೆ ಅವೊತ್ತು ನಾನು ಇಲ್ಲೆ ಕುಳಿತಿದ್ದೆ. ಆಗ ನಮ್ಮ ಆಡಳಿತ ಪಕ್ಷದ ಜನ ಈ ಕಡೆ ನಮ್ಮ ಜನತಾದಳದ ಜನರು ಸೇರಿ ಆಡುತ್ತಿದ್ದ ಮಾತೇನು? ಕೇಂದ್ರ ಸರ್ಕಾರ ಬರಗಾಲಕ್ಕೆ ಯಾವುದೇ ಅನುಕೂಲವನ್ನು ಮಾಡಿಕೊಡುತ್ತಿಲ್ಲ. ಏಕೆ ಕೊಡುತ್ತಿಲ್ಲ. ಹಣವನ್ನು ಕೊಡುತ್ತಿಲ್ಲವೆಂದರು. ಈಗ ನಾನು ಫಿಗರ್ ಕೊಡುತ್ತಿದ್ದೇನೆ. 2001–2002ನೇ ಸಾಲಿನಲ್ಲಿ 1.00 ಲಕ್ಷ ಮೆಟ್ರಿಕ್ ಟನ್ ಅಕ್ಕಿ, ಹಣ 58.72 ಲಕ್ಷ ರೂ. ಬಿಡುಗಡೆ ಮಾಡಿದ್ದರು. 2002–2003 ರ ಸಾಲಿನಲ್ಲಿ ಕರ್ನಾಟಕಕ್ಕೆ ಐದು ಲಕ್ಷ ಮುವತ್ತು ಸಾವಿರ ಮೆಟ್ರಿಕ್ ಟನ್ ಅಕ್ಕಿಯನ್ನು ಪುಕ್ಕಟೆಯಾಗಿ ಕೊಟ್ಟಿದ್ದಾರೆ. ಹಣ 258.54 ಲಕ್ಷ ರೂ. ಬಿಡುಗಡೆ ಮಾಡಿದರು. ಎನ್.ಡಿ.ಎ. ಸರ್ಕಾರವಿದೆ. 2003–2004ರ ಸಾಲಿನಲ್ಲಿ ಆರು ಲಕ್ಷದ ಎಪ್ಪತ್ತೊಂಬತ್ತು ಸಾವಿರ ಮೆಟ್ರಿಕ್ ಟನ್ ಅಕ್ಕಿಯನ್ನು ಕೊಟ್ಟರು. ಹಣವನ್ನು ಮುನ್ನೂರ ಎಂಬತ್ತೊಂದು ಕೋಟಿ ಇಪ್ಪತ್ತೊಂದು ಲಕ್ಷ ರೂಪಾಯಿ ಬಿಡುಗಡೆ ಮಾಡಿದರು.

2004–2005ಕ್ಕೆ ತಾವು ಪಾದಾರ್ಪಣೆ ಮಾಡಿದ ಸಮ್ಮಿಶ್ರ ಸರ್ಕಾರ ನಿಮ್ಮದಾದ ಮೇಲೆ ಮೂರು ಲಕ್ಷದ ಐವತ್ತನಾಲ್ಕು ಸಾವಿರ ಮೆಟ್ರಿಕ್ ಟನ್. ನೂರೇಳು ಕೋಟಿ ಮತ್ತು ಮೂರು ಲಕ್ಷ ರೂಪಾಯಿ ಮಾತ್ರ ಹಣವನ್ನು ಬಿಡುಗಡೆ ಮಾಡಿದ್ದೀರಿ. ಆಲ್‌ಮೋಸ್ಟ್ 2003–2004 ಕ್ಕಿಂತ ಶೇಕಡ 50 ರಷ್ಟು ಕಡಿಮೆ ಬಂದಿದೆ. ಇಷ್ಟಾದರೂ ಸಹ ನೀವು ಘೋಷಣೆ ಮಾಡಿರುವ ಬರಗಾಲ ಪ್ರದೇಶಗಳಲ್ಲಿ ಬರಗಾಲ ಕಾಮಗಾರಿ ಏನಾದರೂ ನಡೆಯುತ್ತಿದೆಯೆ? ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡುತ್ತಿದ್ದೇವೆಯೇ, ಬರುವ ಮೂರು ತಿಂಗಳು ಬಹಳ ದಯನೀಯ ಪರಿಸ್ಥಿತಿ ಅಪ್‌ಟು ಮೇ ಎಂಡ್ ಜೂನ್ ಫಸ್ಟ್ ವೀಕ್ ವರೆಗೂ. ಕೃಷಿ ಕಾರ್ಮಿಕರಿಗೆ ಉದ್ಯೋಗ ಕೊಡಲಿಕ್ಕೆ ಏನಾದರೂ ನಿಮ್ಮಲ್ಲಿ ಕಾರ್ಯಕ್ರಮವಿದೆಯೇ? ಯಾರನ್ನು ಕೇಳಬೇಕು ನಾವು? ನೀವು ಈ ರಾಜಕೀಯ ಗೊಂದಲದಲ್ಲಿ ಸಿಕ್ಕಿ ಹಳ್ಳಿಗಳ ಕಡೆ ನಿಮಗೂ ಹೋಗಲಿಕ್ಕೆ ಪುರುಸೊತ್ತು ಇಲ್ಲ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಅವರ ತಾಲ್ಲೂಕು ಬಿಟ್ಟು ಬೇರೆ ಕಡೆಗೆ ಹೋಗಲಿಕ್ಕೆ ಅವರಿಗೂ ಪುರುಸೊತ್ತು ಇಲ್ಲ. ಯಾವಾಗ ಮತ್ತೆ ಚುನಾವಣೆ ಬರುತ್ತದೋ. ನಮ್ಮ ಕ್ಷೇತ್ರ ಏನಾಗುತ್ತದೋ ಅನ್ನುವ ಭಯ ಅವರಿಗೆ ಇದೆ. ಅಧಿಕಾರಿಗಳು ಗೊಂದಲದಲ್ಲಿ ಸಿಲುಕಿಕೊಂಡು ಅವರು ಎಲ್ಲೂ ಹೋಗುತ್ತಿಲ್ಲ. ಜಿಲ್ಲಾಧಿಕಾರಿಗಳು ಕೆಲವರು ಡಿಸ್ಕೋ ಡಾನ್ಸ್ ಮಾಡಿಕೊಂಡು ಪ್ರತಿಪಕ್ಷಗಳನ್ನು ಹತ್ತಿಕ್ಕುವಂತಹ ಕೆಲಸದಲ್ಲಿ ನಿರತರಾಗಿದ್ದಾರೆ. ಹೀಗಾದರೆ ರಾಜ್ಯದ ಜನತೆಯ ಸಮಸ್ಯೆಗೆ ಸ್ಪಂದಿಸುವವರು ಯಾರು? ಇದಕ್ಕೆ ಉತ್ತರವನ್ನು ಸರ್ಕಾರದ ಹಣಕಾಸು ಸಚಿವರಿಂದ ಕೇಳಲಿಕ್ಕೆ ನಾನು ಇಚ್ಛಿಸುತ್ತೇನೆ. ತಾವೇನು ಭರವಸೆಯನ್ನು ಕೊಡುತ್ತಿದ್ದೀರಿ? ಇನ್ನು ಮುಂದೆ ಬರುವ ದಿವಸಗಳಲ್ಲಿ ಯಾವ ರೀತಿ ನಾವು ಬದುಕಬೇಕೆಂಬ ಬಗ್ಗೆ ತಾವು ಹೇಳಬೇಕು. ಇವತ್ತು ಮೆಕ್ಕೆ ಜೋಳವನ್ನು ಖರೀದಿ ಮಾಡಿದ್ದೀರಿ. ಎ.ಪಿ.ಎಂ.ಸಿ. ಯಾರ್ಡ್‌ಗೆ ಬಂದು ನೀವು ಒಂದು ತಿಂಗಳು ಜಾತಕ ಪಕ್ಷಿಯಂತೆ ಖರೀದಿ ಮಾಡಲಿಕ್ಕೆ ಕಾಯಬೇಕಾಯಿತು. ಖರೀದಿಸಿದ ನಂತರ ಈ ನಿಮಿಷದವರೆಗೂ ಅವರ ಹಣವನ್ನು ನೀವು ಪಾವತಿ ಮಾಡಿಲ್ಲ. ಈ ವೇರ್‌ಹೌಸ್ ಕಾರ್ಪೋರೇಷನ್. ಶಿವಮೊಗ್ಗ. ಹಾವೇರಿ ಮತ್ತು ದಾವಣಗೆರೆ ಇಲ್ಲಿ ಮೆಕ್ಕೆಜೋಳ ಖರೀದಿ ಮಾಡಿದ್ದೀರಿ. ಅದರ ಬಾಬ್ತು 135.42 ಕೋಟಿ ರೂಪಾಯಿಯನ್ನು ಇದುವರೆಗೂ ನೀವು ಪಾವತಿಸಿಲ್ಲ. ಬಾಕಿಯಿದೆ. ಅದರಲ್ಲಿ ಇನ್ನು 4.42 ಅಂದರೆ ನಾಲ್ಕು ಕೋಟಿ ನಲವತ್ತೆರೆಡು ಲಕ್ಷ ರೂಪಾಯಿ ಇನ್ನು ಬಾಕಿಯಿದೆ. ಒಟ್ಟು ಈ ಜಿಲ್ಲೆಯಲ್ಲಿ ಖರೀದಿಸಿದ್ದು 135.42 ಕೋಟಿ ರೂ.ಗಳಲ್ಲಿ ಬಾಕಿ ಪಾವತಿಸಬೇಕಾಗಿರುವ ಹಣ ರೂ. 4.42 ಲಕ್ಷ ಇದೆ. ಶಿವಮೊಗ್ಗ ಜಿಲ್ಲೆಯಲ್ಲಿ ಒಟ್ಟು ರೂ. 68.54 ಲಕ್ಷದಲ್ಲಿ ಎಂಬತ್ತನಾಲ್ಕು ಲಕ್ಷದ

ನಲವತ್ತೊಂಬತ್ತು ಸಾವಿರ ಬಾಕಿ ಇದೆ. ಅಂದರೆ ಒಂದು ಒಂದೂವರೆ ತಿಂಗಳಾದರೂ ನೀವು ಈ ಭಾಗದಲ್ಲಿ ಖರೀದಿ ಮಾಡಿದಂತಹ ಧಾನ್ಯ ಮುಸುಕಿನ ಜೋಳದ ಹಣವನ್ನು ಪಾವತಿಸಿಲ್ಲ. ಹೀಗಾದರೆ ಅವನು ಸಾಲ ಕಟ್ಟುವುದು ಹೇಗೆ? ಜೀವನ ಮಾಡುವುದು ಹೇಗೆ? ಮಾರುಕಟ್ಟೆಯಲ್ಲಿ ಒಳ್ಳೆಯ ಬೆಲೆ ಸಿಕ್ಕಿತೆಂದು ಅವನು ಮುಸುಕಿನ ಜೋಳವನ್ನು ಕೊಟ್ಟು ಒಂದು ತಿಂಗಳಾದರೂ ಸಹ ಇನ್ನು ನೀವು ಹಣವನ್ನು ಪಾವತಿ ಮಾಡಿಲ್ಲ ಅಂದರೆ ಅವನು ಬದುಕುವುದು ಹೇಗೆ? ನೀವು ಅವನ ಜೋಳ. ರಾಗಿ. ಭತ್ತ ಖರೀದಿ ಮಾಡುತ್ತೀರಾ ಅದನ್ನು ಮಾರುತ್ತೀರಾ. ಅವನಿಗೆ ನೀವು ದಾನವನ್ನೇನು ಕೊಡುವುದಿಲ್ಲ.? ಖರೀದಿಯಲ್ಲಿ ಡಿಫೆರೆನ್ಸ್ ಆದರೆ ಕೇಂದ್ರ ಸರ್ಕಾರ ನಿಮ್ಮ ಲಾಸ್ ಅನ್ನು ತುಂಬಿಕೊಡುತ್ತದೆ. ಇಷ್ಟಿದ್ದರೂ ಸಹ ಆವರ್ತ ನಿಧಿಯೆಂದು 400–500 ಕೋಟಿ ರೂಪಾಯಿ ಹಣ ಇಡಲಿಕ್ಕೆ ನಿಮಗೆ ತೊಂದರೆ ಏನು? ಮಾರುಕಟ್ಟೆಯಲ್ಲಿ 24 ಗಂಟೆಯಲ್ಲಿ ಅವನ ಭತ್ತ. ರಾಗಿ. ಜೋಳಕ್ಕೆ ಹಣ ಪಾವತಿಸಲಿಕ್ಕೆ ನಿಮಗೆ ತೊಂದರೆಯೇನು? ರೈತನನ್ನು ಉಳಿಸಬೇಕು ಅನ್ನುವ ಕಳಕಳಿ ನಿಮಗಿದ್ದರೆ 24 ಗಂಟೆಯೊಳಗಾಗಿ ಹಣ ಪಾವತಿಸಲಿಕ್ಕೆ ನಿಮಗೆ ತೊಂದರೆಯೇನು? ನೀವು ಬಂದ ಮೇಲೆ ಯಡಿಯೂರಪ್ಪನವರೇ ನಾವು ಸುಧಾರಣೆ ಮಾಡಿದ್ದೇವೆ. ಹಿಂದೆ ಇಂತಹ ಪರಿಸ್ಥಿತಿ ಇತ್ತು. ನಾನು ಬಂದ ಮೇಲೆ ಖರೀದಿಸಿದ ಎಂಟು ದಿನದೊಳಗೆ ಪೇಮೆಂಟ್ ಮಾಡಿದ್ದೇನೆ. ಒಂದು ರೂಪಾಯಿ ಬಾಕಿಯಿಲ್ಲ ಅಂತ ಹೇಳಿದ್ದರೆ ಸಿದ್ಧರಾಮಯ್ಯನವರ ಬೆನ್ನು ತಟ್ಟುತ್ತಿದ್ದೆ. ಹೌದು ರೈತರ ಪರವಾಗಿ ತಾವು ಏನೋ ಮಾಡಿದ್ದೀರಿ ಅಂತ ಹೇಳಿ ಯೋಚನೆ ಮಾಡುತ್ತಿದ್ದೆವು. ಆದರೆ ಈ ದಿಕ್ಕಿನಲ್ಲಿ ಯಾವುದೇ ಪ್ರಾಮಾಣಿಕವಾದ ಪ್ರಯತ್ನ ನಿಮ್ಮಿಂದ ಆಗಿಲ್ಲ. ಅದಕ್ಕೋಸ್ಕರ ರೈತರನ್ನು ಉದ್ಧಾರ ಮಾಡುತ್ತೇವೆಂದು ದೊಡ್ಡ ದೊಡ್ಡ ಭಾಷಣ ಮಾಡಿ ನೀವು ತೃಪ್ತಿ ಪಟ್ಟುಕೊಳ್ಳದೇನೆ ಬರಗಾಲಕ್ಕೆ ತುತ್ತಾದಂತಹ ಈ ರೈತನ ಜೊತೆ ಚೆಲ್ಲಾಟ ಮಾಡದೇನೆ ಅವನ ನೆರವಿಗೆ ಬರಬೇಕು. ಕನಿಷ್ಟ 500 ಕೋಟಿ ರೂಪಾಯಿ ಆವರ್ತ ನಿಧಿಯನ್ನು ಇಡಬೇಕು. ಮುಂದೆ ರೈತನ ರಕ್ಷಣೆಗೆ ನೀವು ಬರಬೇಕು. ಇದುವರೆಗೆ ರಾಜ್ಯ ಸರ್ಕಾರದ ಬರಗಾಲದ ಕಾಮಗಾರಿಗಾಗಿ ನಿಮ್ಮ ಬೊಕ್ಕಸದಿಂದ ಒಂದು ನಯಾ ಪೈಸೆಯನ್ನು ನೀವು ಖರ್ಚು ಮಾಡಿಲ್ಲ. ನೀವು ಉತ್ತರಿಸುವ ಸಮಯದಲ್ಲಿ ನಿಮ್ಮ ಅಂಕಿ ಅಂಶವನ್ನು ಹೇಳಿ. ಬರಗಾಲ ಅಂತ ಹೇಳಿ ಕೇಂದ್ರ ಸರ್ಕಾರವನ್ನು ತೋರಿಸಿ ಕೈಕಟ್ಟಿ ಸುಮ್ಮನೆ ಕುಳಿತುಕೊಳ್ಳುತ್ತೀರಾ? ರಾಜ್ಯದಲ್ಲಿ ಎಲ್ಲಿ ಕೆಲಸ ನಡೆಯುತ್ತಿದೆ.? ನಮ್ಮ ಗ್ರಾಮಪಂಚಾಯಿತಿ ಗ್ರಾಮೀಣಜನರ. ಸ್ಥಿತಿ ಏನೂಂತ ನಮ್ಮ ಎಲ್ಲ ಶಾಸಕರ ಕಣ್ಣು ತೆರೆಸುವಂತಹ ಅಂಕಿಅಂಶವನ್ನು ನಾನು ನಿಮಗೆ ಹೇಳುತ್ತೇನೆ. ಈ ಸರ್ವ

ಶಿಕ್ಷಣ ಅಭಿಯಾನ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ಉಸ್ತುವಾರಿ ಇದಕ್ಕೆ. ಅವರ ಅಧ್ಯಕ್ಷತೆಯಲ್ಲಿ ಈ ಕಾರ್ಯಕ್ರಮವನ್ನು ದೇಶದಲ್ಲಿ ಅವರು ನೋಡಿಕೊಳ್ಳುತ್ತಿದ್ದಾರೆ. ನಿಮಗೆ ಕಣ್ಣು ತೆರೆಸುವಂತಹ ಅಂಕಿಅಂಶವೊಂದನ್ನು ನಿಮಗೆ ಹೇಳುತ್ತೇನೆ. 21-2-2005 ರಲ್ಲಿ ಪ್ರಧಾನಮಂತ್ರಿ ಮನಮೋಹನ್ ಸಿಂಗ್ ಅವರ ಅಧ್ಯಕ್ಷತೆಯಲ್ಲಿ ಸರ್ವ ಶಿಕ್ಷಣ ಕಾರ್ಯಕ್ರಮವನ್ನು ರಿವ್ಯೂ ಮಾಡಲಿಕ್ಕೆ ಒಂದು ಕಾರ್ಯಕ್ರಮ ಅಲ್ಲಿ ಸೇರಿತ್ತು. ಎಕ್ಸ್‌ಪರ್ಟ್ಸ್ ಎಲ್ಲರೂ ಅಲ್ಲಿಗೆ ಹೋಗಿದ್ದರು. ಹ್ಯೂಮನ್ ರೀಸರ್ಚ್ ಮಿನಿಸ್ಟರ್ ಶ್ರೀಯುತ ಅರ್ಜುನಸಿಂಗ್ ಅವರು ಒಂದು ರಿಪೋರ್ಟ್ ಮಂಡಿಸಿದರು. ಆ ರಿಪೋರ್ಟ್‌ನಲ್ಲಿ 100 ಮಕ್ಕಳು 1ನೇ ತರಗತಿಗೆ ಸೇರಿದರೆ 7ನೇ ತರಗತಿಗೆ ಹೋಗುವುದರೊಳಗೆ drop outs ಆಗಿ 47 ಮಕ್ಕಳು ಮಾತ್ರ ಉಳಿದು. ಇನ್ನು 53 ಜನ ಮಕ್ಕಳು ಶಾಲೆಯಿಂದ ಹೊರಗೆ ಹೋಗುತ್ತಾರೆ. ಯಾವಾಗ ಅಂದರೆ ಕಾಲೇಜಿನಲ್ಲಿ. ಇದನ್ನು ನಾನು ಹೇಳುತ್ತಿಲ್ಲ. ಶ್ರೀ ಅರ್ಜುನ್‌ಸಿಂಗ್ ಕೊಟ್ಟಿರುವ ವರದಿಯ ಕಾಪಿಯಲ್ಲಿದೆ. ಈ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಏನು ಆಗಲಿಲ್ಲ ಅಂತ ನಾನು ಹೇಳುವುದಿಲ್ಲ. ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದ ಹೆಗ್ಗಳಿಕೆ ಎನ್.ಡಿ.ಎ ಸರ್ಕಾರದ ವಾಜಪೇಯಿಯವರಿಗೆ ಸಲ್ಲಬೇಕು ಅಂತ ಹೇಳುವುದು ಬೇರೆ ಮಾತು.

ಆದರೆ ನಿಮ್ಮ ಮಂತ್ರಿಗಳೇ ಪ್ರಧಾನಮಂತ್ರಿಗಳ ಸಮಕ್ಷಮದಲ್ಲಿ ಕೊಟ್ಟಿರುವ ವರದಿಯ ಪ್ರಕಾರ ಶೇ 100ರಲ್ಲಿ 53 ಜನ 1 ನೇ ತರಗತಿಯಿಂದ 7ನೇ ತರಗತಿಗೆ ಹೋಗುವುದರೊಳಗೆ ಶಾಲೆ ಬಿಟ್ಟು ಬರುತ್ತಾರೆಂದರೆ ಇದರ ಅರ್ಥ ಏನು? ಇದರರ್ಥ ಏನೆಂದರೆ ಗ್ರಾಮೀಣ ಜನರ ಜೀವನ ಸ್ಥಿತಿ ಸರಿಯಿಲ್ಲ. ಎಲ್ಲಾ ಅನುಕೂಲವನ್ನು ಮಾಡಿಕೊಟ್ಟರೂ ಸಹ ಗ್ರಾಮೀಣ ಜನ ಶಾಲೆಗೆ ಮಕ್ಕಳನ್ನು ಕಳುಹಿಸುವಂತಹ ಸ್ಥಿತಿಯಲ್ಲಿಲ್ಲ. ಗುಳೆ ಹೋಗುತ್ತಾರೆ. ಕೂಲಿಗೆ ಕರೆದುಕೊಂಡು ಹೋಗುತ್ತಾರೆ. ಹೀಗಾಗಿ ಇವತ್ತು ನಮ್ಮ ನಿರೀಕ್ಷೆಯಂತೆ ಈ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮ ಜಾರಿಗೆ ಬಂದರೂ ಸಹ ಈ ಗ್ರಾಮೀಣ ಜನತೆಗೆ ಅವರ ಕಾಲ ಮೇಲೆ ಅವರು ನಿಲ್ಲುವ ವ್ಯವಸ್ಥೆ. ಅವರ ಮಕ್ಕಳನ್ನು ಶಾಲೆಗೆ ಕಳುಹಿಸುವಂತಹ ವ್ಯವಸ್ಥೆ ನಮ್ಮಿಂದ ಆಗಿಲ್ಲ ಎನ್ನುವ ಕಣ್ಣು ತೆರೆಸುವಂತಹ ಅಂಕಿ ಅಂಶ ಸಿಗುತ್ತದೆ ಎಂದರೆ ಅದಕ್ಕೆ ನಾನು ಪ್ರಾರಂಭದಲ್ಲಿ ನಿಮ್ಮನ್ನು ಕೇಳಿದ್ದು. ಶಿಕ್ಷಣ ಕ್ಷೇತ್ರ ಸುಧಾರಣೆ ಮಾಡುವುದರ ಬಗ್ಗೆ. ಗ್ರಾಮೀಣ ಮಕ್ಕಳೆಲ್ಲರೂ ಶಾಲೆಗೆ ಹೋಗುವುದರ ಬಗ್ಗೆ, ಅವರನ್ನು ಆಕರ್ಷಣೆ ಮಾಡುವ ಬಗ್ಗೆ, ಆ ತಂದೆ ತಾಯಿಯವರು ಕಷ್ಟದಲ್ಲಿ ಸಿಲುಕಿ ಅವರನ್ನು ಕೂಲಿಗೆ ಕರೆದುಕೊಂಡು ಹೋಗದೆ, ಗುಳೆ ಹೋಗದೇನೆ ಅವರು ತಮ್ಮ ಕಾಲ ಮೇಲೆ

ನಿಲ್ಲುವಂತಹ ಶಿಕ್ಷಣವನ್ನು ಕೊಡುವುದರ ಬಗ್ಗೆ ಅವರನ್ನು ಎಜುಕೇಟ್ ಮಾಡಲಿಕ್ಕೆ ನಿಮ್ಮ ಕಾರ್ಯಕ್ರಮ ಏನು ಅಂತ ನಾನು ಕೇಳಲಿಚ್ಚಿಸುತ್ತೇನೆ.

ಇದು ನಮ್ಮ ಕಣ್ಣನ್ನು ತೆರೆಸುವಂಥ ಇಡೀ ದೇಶದ ಸಮಗ್ರವಾದಂಥ ಒಂದು ಚಿತ್ರ. ಯಾವಾಗ ಅಂದರೆ. ಫೆಬ್ರವರಿ 21. 2005 ರಂದು ದೆಹಲಿಯಲ್ಲಿ ಮಾನ್ಯ ಅರ್ಜುನ್‌ಸಿಂಗ್‌ರವರು ಆ ಸಭೆಯಲ್ಲಿ ಇಟ್ಟಂಥ ಒಂದು ರಿಪೋರ್ಟ್ ಇದು. ಇದು ಇವತ್ತು ನಮ್ಮ ಗ್ರಾಮೀಣ ಜನರ ಶಿಕ್ಷಣದ ಸ್ಥಿತಿಗತಿ ಏನಾಗಿದೆ ಎಂಬ ಅಂಕಿಅಂಶವನ್ನು ತಮ್ಮ ಮುಂದೆ ನಾವು ಇಡುವಂಥ ಪ್ರಯತ್ನವನ್ನು ಮಾಡಿದ್ದೇವೆ. ಮಾನ್ಯ ಸಿದ್ದರಾಮಯ್ಯನವರೆ. ಊಟಕ್ಕೆ ಮೊದಲು ನಾನು ಒಂದು ಪ್ರಮುಖವಾದ ವಿಚಾರವನ್ನು ತಮ್ಮ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಗ್ರಾಮೀಣ ಅಭಿವೃದ್ಧಿ ಸಚಿವರನ್ನು ಇದರ ಬಗ್ಗೆ ನಾನು ಭಾಷಣ ಮಾಡುವುದರ ಒಳಗೆ ಅಂಕಿಅಂಶವನ್ನು ತರಿಸಿ ಕೊಡಿ ಎಂದು ಕೇಳಿದ್ದೆ. ಅವರು ಬಹುಶಃ ವಾಸ್ತವಿಕ ಸತ್ಯ ಸಂಗತಿಯನ್ನು ತಿಳಿಸಬೇಕಲ್ಲಾ ಎಂದು ಹಿಂದೆ ಮುಂದೆ ನೋಡಿ ಅವರು ಇದುವರೆಗೆ ನನಗೆ ಅದರ ಅಂಕಿಅಂಶವನ್ನು ಕೊಡಲಿಲ್ಲ. ಇದು ಗೊತ್ತಿರುವಂಥದ್ದು ನಾನು ನಿಮ್ಮನ್ನು ಪ್ರಾಮಾಣಿಕವಾಗಿ ಕೇಳಿದೆ. ಎಂ.ಪಿ. ಪ್ರಕಾಶ್‌ರವರೂ ಇದ್ದರು. ಗ್ರಾಮೀಣಾಭಿವೃದ್ಧಿ ಬಗ್ಗೆ ಕಳಕಳಿ ಇದ್ದಂಥ ಅನುಭವಿ ಇದ್ದಾರೆ. ಬೇಲೂರು ಘೋಷಣೆಯಾಯಿತಲ್ಲಾ. ಇಡೀ ರಾಜ್ಯದ ಜನತೆಗೆ ನಾವು ಏನು ಹೇಳಿದೆವು? ಗ್ರಾಮಪಂಚಾಯಿತಿಯನ್ನು ಬಲಪಡಿಸಬೇಕು. ಅಭಿವೃದ್ಧಿ ಕಾರ್ಯಕ್ಕೆ ಹೆಚ್ಚು ಹಣವನ್ನು ಕೊಡಬೇಕು. ಎಲ್ಲಿಯವರೆಗೆ ಅಂದಿನ ಮುಖ್ಯಮಂತ್ರಿಗಳಾಗಿದ್ದ ಎಸ್.ಎಂ. ಕೃಷ್ಣರವರು ಹೇಳಿದ್ದರು ಎಂದರೆ. ಚೆಕ್ಕನ್ನು ನೇರವಾಗಿ ಗ್ರಾಮಪಂಚಾಯಿತಿಗೆ ಕಳಿಸಿಕೊಡುತ್ತೇವೆ ಎಂಬ ಮಾತನ್ನು ಹೇಳಿದ್ದರು. ನಿಮ್ಮ ಕಡೆ ಈ ಕಡೆ ಇರುವಂಥ ಶಾಸಕರನ್ನು ಕೇಳಿ. ನಾನು ಈಗಾಗಲೆ ತಮಗೆ ಹೇಳಿದ್ದೇನೆ. ಇವತ್ತು ನುಡಿಗೂ ನಡೆಗೂ ಪ್ರತಿ ಹೆಜ್ಜೆಯಲ್ಲೂ ಅಂತರವಿದೆಯೆಂದು ಹೇಳಿದಾಗ ತಮಗೆ ನೋವಾಯಿತು. ಬೇಲೂರು ಘೋಷಣೆಯ ಸಂದರ್ಭದಲ್ಲಿ ಉತ್ತರನ ಪೌರುಷದ ಮಾತನ್ನು ಹೇಳಿದಿರಿ. ನಾನು ಅಂಕಿಅಂಶವನ್ನು ಹೇಳುತ್ತಿದ್ದೇನೆ. ನಾನು ಅಧಿಕಾರಿಗಳ ಹತ್ತಿರ ಮಾತನಾಡಿ 2003-04ನೇ ಸಾಲಿಗೆ 5 ಲಕ್ಷಕ್ಕೆ ಅಭಿವೃದ್ಧಿ ಕಾರ್ಯವೆಂದು ತಾವು ಬಿಡುಗಡೆ ಮಾಡಿರುವ ಹಣ ಪ್ರತಿ ಗ್ರಾಮಪಂಚಾಯಿತಿಗೆ ಕೇವಲ 80 ಸಾವಿರ 2004-05ನೇ ಸಾಲಿಗೆ ಪ್ರತಿ ಗ್ರಾಮಪಂಚಾಯಿತಿಗೆ ಈ ನಿಮಿಷದವರೆಗೆ ತಾವು ಕೊಟ್ಟಿರುವ 83 ಸಾವಿರ ಮಾತ್ರ. ಕೆ.ಪಿ.ಟಿಸಿ.ಎಲ್.ನಲ್ಲಿ adjust ಮಾಡಿಕೊಂಡಿದ್ದೀರಿ.

ಎಷ್ಟು ಮಾಡಿಕೊಂಡಿದ್ದೀರಿ. ಅದನ್ನು ಸೇರಿಸಿದರೂ ಹೋದ ವರ್ಷವಾಗಲಿ. ಈ ವರ್ಷವಾಗಲಿ ಎರಡೂವರೆ ಲಕ್ಷ ದಾಟುವುದಿಲ್ಲ. ಸೋನಿಯಾಗಾಂಧಿಯವರ ಎದುರುಗಡೆ ಬೇಲೂರಿನಲ್ಲಿ ಘೋಷಣೆ ಮಾಡಿ ಈ ಹಣವನ್ನು 2003–04 ರ ಬಾಕಿ ಉಳಿದ ಎರಡೂವರೆ ಲಕ್ಷ ಹಣವನ್ನು ಅಭಿವೃದ್ಧಿಗೆ ಕೊಡುತ್ತೀರ...

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಯವರು) ಅದು ಹಿಂದಿನ ಸರ್ಕಾರದ್ದು.

ಶ್ರೀ ಬಿ.ಎಸ್. ಯಡಿಯೂರಪ್ಪ: ಸರ್ಕಾರ ಯಾವುದೇ ಇರಲಿ. ಅದು **continuation** ತಾನೆ? 2003–04ರಲ್ಲಿ ಅಭಿವೃದ್ಧಿಗೆ ನೀವು ಕೊಟ್ಟಿರುವುದು 83 ಸಾವಿರ ಮಾತ್ರ. ಕೆ.ಪಿ.ಟಿ.ಸಿ.ಎಲ್. **adjustment** ಮಾಡಿಕೊಂಡಿರಿ. ಅದನ್ನೂ ಒಪ್ಪಿಕೊಳ್ಳುತ್ತೇನೆ. ಎರಡೂವರೆ ಲಕ್ಷ ಎಂದು ಇಟ್ಟುಕೊಳ್ಳಿ. ಇನ್ನು ಉಳಿದಂಥ ಎರಡೂವರೆ ಲಕ್ಷ ಹೋದ ವರ್ಷದ್ದು. ಈ ವರ್ಷದ್ದು ಈ ನಿಮಿಷದವರೆಗೆ ನೀವು ಕೊಟ್ಟಿರುವಂಥದ್ದು ಕೇವಲ 83 ಸಾವಿರ. ಕೆ.ಪಿ.ಟಿ.ಸಿ.ಎಲ್. ದನ್ನು ಸೇರಿಸಿಕೊಂಡು ಲೆಕ್ಕ ಹಾಕಿದರೂ 1 ಲಕ್ಷದ 83 ಸಾವಿರ ಒಂದು ಪಂಚಾಯಿತಿಗೆ ದಾಟುವುದಿಲ್ಲ. ನಿನ್ನೆ ಮಾತನಾಡಬೇಕಾರೆ ಆ ಹಣವನ್ನು ಮಾರ್ಚ್‌ನೊಳಗೆ ಬಿಡುಗಡೆ ಮಾಡುತ್ತೇವೆಂದು ಹೇಳಿದ್ದೀರಿ. ನಾನು ಸಿದ್ದರಾಮಯ್ಯನವರನ್ನು ನೇರವಾಗಿ ಆಗ್ರಹ ಮಾಡುತ್ತೇನೆ. ಹೋದ ವರ್ಷದ್ದು ಏನು ಮಾಡಬೇಕು ಎಂಬ ಬಗ್ಗೆ ಚರ್ಚೆ ಮಾಡೋಣ. ಈ ಬಾರಿಯದ್ದಾದರೂ ಐದು ಲಕ್ಷ ಯಾವುದಕ್ಕೂ **adjustment** ಮಾಡಿಕೊಳ್ಳದೆಯೆ ನೇರವಾಗಿ ಹಣವನ್ನು ಕೊಡುತ್ತೀರಾ? ಬಿಡುಗಡೆಮಾಡುತ್ತೀರಾ? ತಾವು ಉತ್ತರ ಕೊಡುವ ಸಂದರ್ಭದಲ್ಲಿ ಹೇಳಬೇಕು. ಇತ್ತೀಚೆಗೆ ಕೆ.ಪಿ.ಟಿ.ಸಿ.ಎಲ್. ಸಚಿವರು ಬರುವುದೇ ಇಲ್ಲ. ಅವರನ್ನು ಹುಡುಕಬೇಕಾಗಿದೆ. ಎಲ್ಲೋ ಕಾಣಿಸುತ್ತಾರೆ ಹೊರಟುಹೋಗುತ್ತಾರೆ. ಈಗ ಇದ್ದಾರೆಯೆ? ಇದು ಯಾವ ರೀತಿಯ ನಿಮ್ಮ **adjustment** ಎಂದು ನನಗೆ ಗೊತ್ತಿಲ್ಲ.

ಛೇರ್ಮನ್: ಮಾನ್ಯ ಯಡಿಯೂರಪ್ಪನವರೆ ಒಂದೂವರೆ ಗಂಟೆಯಾಯಿತು. ಊಟಕ್ಕೆ ಬಿಟ್ಟು ಅನಂತರ ಮುಂದುವರೆಸುತ್ತಿರಲ್ಲಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಖಂಡಿತವಾಗಿ. ತಾವು ಹೇಗೆ ಬೆಲ್ಲನ್ನು ಹೊಡೆಯುತ್ತಿರೋ ಹಾಗೆ.

ಛೇರ್ಮನ್: ಬೆಲ್ಲು ಬೇಡ. ಅವರು ಮುಂದುವರೆಸುವಂತಿದ್ದರೆ ಮುಂದುವರೆಸಿ. ಇಲ್ಲದಿದ್ದರೆ ಮೂರು ಗಂಟೆಗೆ ಕಂಟಿನ್ಯೂ ಮಾಡುವುದಿದ್ದರೆ ಮಾಡಿ.

ಶ್ರೀ ವಾಟಾಳ್ ನಾಗರಾಜ್: ಊಟ ಆದಮೇಲೆ ಬಂದು ಅವರು ಮಾತನಾಡಲಿ. ಆಗಬಹುದು.

ಛೇರ್ಮನ್: ಈಗ ಸದನವನ್ನು ಮಧ್ಯಾಹ್ನ ಎರಡೂವರೆ ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಮಧ್ಯಾಹ್ನ 1 ಗಂಟೆ 35 ನಿಮಿಷಕ್ಕೆ ಮುಂದೂಡಿ ಮತ್ತೆ 2 ಗಂಟೆ 30 ನಿಮಿಷಕ್ಕೆ ಸಮಾವೇಶಗೊಳ್ಳಲು ನಿರ್ಣಯಿಸಿತು)

(ಸಭೆಯು ಪುನಃ : 2–50ಕ್ಕೆ ಸಮಾವೇಶಗೊಂಡಿತು. ಮಾನ್ಯ ಅಧ್ಯಕ್ಷರಾದ ಶ್ರೀ ಕೃಷ್ಣ ಅವರು ಅಧ್ಯಕ್ಷ ಸ್ಥಾನದಲ್ಲಿದ್ದರು)

ಶ್ರೀ ಬಿ.ಎಸ್. ಯಡಿಯೂರಪ್ಪ:– ಮಾನ್ಯ ಅಧ್ಯಕ್ಷರೆ,

ಶ್ರೀ ವಾಟಾಳ್ ನಾಗರಾಜ್:– ಮಾನ್ಯ ಯಡಿಯೂರಪ್ಪನವರೇ ಒಂದು ನಿಮಿಷ ಇರಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಮೊದಲನೇ ಸಾಲಿನ ಬೆಂಚ್‌ನಲ್ಲಿ ಯಾರೂ ಇಲ್ಲ.

ಶ್ರೀ ವಾಟಾಳ್ ನಾಗರಾಜ್:– ನಾಲ್ಕೇ ಜನ ಇದ್ದಾರೆ. ಇದೇನು ಸರ್ಕಾರವೇ?

ಶ್ರೀ ಮಿರಾಜುದ್ದೀನ್. ಎಸ್. ಪಾಟೀಲ್ (ಪಶುಸಂಗೋಪನಾ ಸಚಿವರು):– ನಾನು ಇದ್ದೇನೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಿಮಗೆ ಹಾರ್ಟ್ ಅಟ್ಯಾಕ್ ಆದರೆ ನಾನೇನು ಮಾಡುವುದು?

ಶ್ರೀ ವಾಟಾಳ್ ನಾಗರಾಜ್:– ಪರಿಸ್ಥಿತಿ ಏನು ಇದು?

(ಗೊಂದಲ)

ಅಧ್ಯಕ್ಷರು:– ಕ್ಯಾಬಿನೆಟ್ ಸಚಿವರು ಇದ್ದಾರೆ.

(ಗೊಂದಲ)

ಶ್ರೀ ಮಿರಾಜುದ್ದೀನ್ ಎಸ್ ಪಾಟೀಲ್:– ಮಾನ್ಯ ಮಾಧುಸ್ವಾಮಿಯವರೇ ನೀವು ಆ ತರಹ ಮಾತನಾಡಬಾರದು.

(ಗೊಂದಲ)